ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್

# ಶಾಲಾ ನಾಯಕತ್ವ ಅಭಿವೃದ್ಧಿ





# ರಾಷ್ಟ್ರೀಯ ಕಾರ್ಯಕ್ರಮ ವಿನ್ಯಾಸ
# ಮತ್ತು
# ಪಠ್ಯಕ್ರಮ ಚೌಕಟ್ಟು

ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ಎಜುಕೇಷನಲ್ ಪ್ಲಾನಿಂಗ್ ಆಂಡ್ ಅಡ್ಮಿನಿಸ್ಟ್ರೇಶನ್

## ತಂಡದ ಸದಸ್ಯರು

ರಶ್ಮಿ ದಿವಾನ್
ಸುನಿತ ಚಗ್
ಕಶ್ಯಪಿ ಅವಸ್ಥಿ
ಸುಛಿತ.ಜಿ.ವಿ
ಎನ್.ಮೈಥಿಲಿ
ಸೀಮಾ.ಸಿಂಗ್
ಶ್ರೇಯಾ ತಿವಾರಿ
ಜಿ.ಎಸ್.ನೇಗಿ
ಚಾರು ಸ್ಮಿತಾ ಮಲಿಕ್
ದರಕ್ಷನ್ ಪರ್ವೀನ್
ಮೊನಿಕ ಬಜಾಜ್

NATIONAL CENTRE FOR SCHOOL LEADERSHIP
NCSL
Every Child Learns
Every School Excels

ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್

# ರಾಷ್ಟ್ರೀಯ ಕಾರ್ಯಕ್ರಮ ವಿನ್ಯಾಸ
# ಮತ್ತು
# ಪಠ್ಯಕ್ರಮ ಚೌಕಟ್ಟು

ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ಎಜುಕೇಷನಲ್ ಪ್ಲಾನಿಂಗ್ ಆಂಡ್ ಅಡ್ಮಿನಿಸ್ಟ್ರೇಶನ್

ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ಎಜುಕೇಷನಲ್ ಪ್ಲಾನಿಂಗ್ ಆಂಡ್ ಅಡ್ಮಿನಿಸ್ಟ್ರೇಶನ್ (**ನೀಪಾ**)
(Declared by the Government of India under Section 3 of the UGC Act, 1956)

© NIEPA

First Published : February 2014
Published in Kannad : March 2019

Published by the Registrar, National Institute of Educational Planning and Administration (NIEPA),
17-B, Sri Aurobindo Marg, New Delhi - 110016 and Layout by Bachan Singh

# ಮುನ್ನುಡಿ

ಭಾರತದ ಶಿಕ್ಷಣ ವ್ಯವಸ್ಥೆಯು ಇತ್ತೀಚಿನ ವರ್ಷಗಳಲ್ಲಿ ಅಭೂತಪೂರ್ವ ವೇಗದಲ್ಲಿ ಅಗಾಧ ಪ್ರಮಾಣದಲ್ಲಿ ವಿಸ್ತಾರಗೊಂಡು ಪ್ರಾಥಮಿಕಶಿಕ್ಷಣದ ಅವಕಾಶಗಳನ್ನು ಸಂಪೂರ್ಣವಾಗಿ ಸಾರ್ವತ್ರೀಕರಣಗೊಳಿಸುವ ಹಂತಕ್ಕೆ ಬಂದಿರುವುದಕ್ಕೆ ಸಾಕ್ಷಿಯಾಗಿದೆ. ಪ್ರೌಢಶಾಲೆಗಳ ಸಂಖ್ಯೆಗಳಲ್ಲಿ ಕೂಡಾ ಗಣನೀಯ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದಿದ್ದು ಈ ಕ್ಷೇತ್ರ ಕೂಡಾ ದೇಶದ ವಿವಿಧ ಭಾಗಗಳಲ್ಲಿ ವೇಗವಾಗಿ ಸಾರ್ವತ್ರೀಕರಣದತ್ತ ದಾಪುಗಾಲಿಡುತ್ತಿದೆ. ಈ ಪ್ರಮಾಣಾತ್ಮಕ ಹೆಚ್ಚಳವು ಮಕ್ಕಳ ಭಾಗವಹಿಸುವಿಕೆಯ ಪ್ರಮಾಣದ ಮೇಲೆ ಗಣನೀಯ ಪ್ರಭಾವವನ್ನು ಬೀರುತ್ತಿದ್ದರೂ, ಗುಣಮಟ್ಟಕ್ಕೆ ಸಂಬಂಧಿಸಿದ ಆಶಯಗಳು ಹಾಗೆಯೇ ಉಳಿದಿವೆ. ಕೇವಲ ದೊಡ್ಡ ಪ್ರಮಾಣದ ಕಾರ್ಯತಂತ್ರಗಳಿಂದಲೇ ಗುಣಮಟ್ಟದ ಬಗೆಗಿನ ಕಾಳಜಿಗಳನ್ನು ಎದುರಿಸಲು ಸಾಧ್ಯವಿಲ್ಲ ಎಂಬ ಅರಿವು ಹೆಚ್ಚಾಗುತ್ತಿದೆ. ಆದ್ದರಿಂದ ಇದು ನಮ್ಮ ಗಮನವನ್ನು ವ್ಯವಸ್ಥಾ ಹಂತದಿಂದ ಸುಧಾರಣೆಗಳಿಂದ ಶಾಲಾ ಹಂತದ ಕ್ರಿಯೆಗಳೆಡೆಗೆ ಕೇಂದ್ರೀಕರಿಸುವುದನ್ನು ಅಪೇಕ್ಷಿಸುತ್ತದೆ. ರಾಷ್ಟ್ರ ವ್ಯಾಪ್ತಿಯಾಗಿ 1.5 ಮಿಲಿಯನ್‌ಗಿಂತಲೂ ಹೆಚ್ಚಿನ ಶಾಲೆಗಳನ್ನು ನಿಭಾಯಿಸಬೇಕಾಗಿರುವ ಹಿನ್ನಲೆಯಲ್ಲಿ ಇದು ಸುಲಭದ ಕೆಲಸವಲ್ಲ ಮತ್ತು, ಕೇಂದ್ರ ಮಟ್ಟದ ಯಾವುದೇ ಕ್ರಮಗಳಿಂದ ಇದು ಸಾಧ್ಯವಿಲ್ಲ. ಪ್ರತಿ ಶಾಲೆಯು ಒಂದು ಫಲಪ್ರದ ಕಲಿಕಾ ಸಂಸ್ಥೆಯಾಗಿ ರೂಪಾಂತರಗೊಳ್ಳಲು ಅಲ್ಲಿನ ಸ್ಥಳೀಯ ಭಾಗೀದಾರರ ನೇರ ತೊಡಗಿಸಿಕೊಳ್ಳುವಿಕೆಯನ್ನು ಅಪೇಕ್ಷಿಸುತ್ತದೆ. ಇದೇ, ಈ ದಾಖಲೆಯಲ್ಲಿ ಪ್ರಸ್ತುತ ಪಡಿಸಿದ 'ಶಾಲಾ ನಾಯಕತ್ವ ಅಭಿವೃದ್ಧಿಗೆ ರಾಷ್ಟ್ರೀಯ ಕಾರ್ಯಕ್ರಮ'ದ ಗುರಿಯೂ ಆಗಿದೆ. ಈ ಕೈಂಕರ್ಯದಲ್ಲಿ ಶಾಲೆಯ ಮುಖ್ಯ ಶಿಕ್ಷಕರು ನಿಸ್ಸಂಶಯವಾಗಿ ಪ್ರಾಮುಖ್ಯತೆಯ ಸ್ಥಾನವನ್ನು ಹೊಂದುವರು.

ಈ ದಾಖಲೆಯಲ್ಲಿ ಪ್ರಸ್ತುತಪಡಿಸಿದ 'ಕಾರ್ಯಕ್ರಮ ವಿನ್ಯಾಸ ಮತ್ತು ಪಠ್ಯಕ್ರಮ ಚೌಕಟ್ಟು', ಪ್ರತಿ ಶಾಲೆಯ ಬದಲಾವಣೆ ಮತ್ತು ಅಭಿವೃದ್ಧಿಗೆ ಅಗತ್ಯವಿರುವ ಪರಿವರ್ತನಾತ್ಮಕ ಕಾರ್ಯಸೂಚಿಯ ಪ್ರಮುಖ ತತ್ವಗಳನ್ನು ಅನಾವರಣಗೊಳಿಸುತ್ತದೆ. ಅಲ್ಲದೆ ಇದು ಶಾಲಾ ವ್ಯವಸ್ಥೆಯಲ್ಲಿ ನಾಯಕತ್ವ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಒಳಗೊಳ್ಳುವ ಪಠ್ಯವಸ್ತು ಮತ್ತು ಪ್ರಕ್ರಿಯೆಗಳನ್ನು ಸುಲಲಿತ ಶೈಲಿಯಲ್ಲಿ ನಿರೂಪಿಸುತ್ತದೆ. ಇದು ನಾಯಕತ್ವ ಅಭಿವೃದ್ಧಿಯ ಭಾಗವಾಗಿರುವ ಸಾಮರ್ಥ್ಯಾಭಿವೃದ್ಧಿಗೆ ಪೂರಕವಾಗಿ ಸಂಶೋಧನೆ ಮತ್ತು ಸಾಂಸ್ಥಿಕ ಜಾಲಬಂಧ ನಿರ್ಮಾಣದ ಅಗತ್ಯವನ್ನು ಒತ್ತಿ ಹೇಳುತ್ತದೆ. ಈ ಪಠ್ಯಕ್ರಮವು ಕಲಿಕಾರ್ಥಿ, ಕಲಿಕೆ ಮತ್ತು ಬೋಧನೆಯನ್ನು ಎಲ್ಲಾ ಚಟುವಟಿಕೆಗಳ ಪ್ರಮುಖ ಕೇಂದ್ರವನ್ನಾಗಿಸಿದೆ. ಇದನ್ನು ರಾಷ್ಟ್ರ ಮತ್ತು ರಾಜ್ಯಮಟ್ಟಗಳಲ್ಲಿ, ತಜ್ಞರು ಮತ್ತು ವಿವಿಧ ಹಂತದ ಕಾರ್ಯನಿರ್ವಾಹಕರನ್ನು ಒಳಗೊಂಡು ನಡೆಸಿದ ಸರಣಿ ಸಮಾಲೋಚನೆಗಳನ್ನು ಆಧರಿಸಿ ಅಭಿವೃದ್ಧಿ ಪಡಿಸಲಾಗಿದೆ. ಪಠ್ಯಕ್ರಮವು ಶಾಲೆಯ ಗುಣಮಟ್ಟದ ಕಾಳಜಿಗಳನ್ನು ಮಾತ್ರವಲ್ಲದೆ ನಮ್ಮ ಶಾಲೆಗಳು ಕಾರ್ಯನಿರ್ವಹಿಸುತ್ತಿರುವ ವೈವಿಧ್ಯಮಯ ಸಂದರ್ಭ ಮತ್ತು ಸ್ಥಿತಿ–ಗತಿಗಳನ್ನು ಗಣನೆಗೆ ತೆಗೆದುಕೊಂಡು ಸಮತೆಯ ಅಗತ್ಯವನ್ನು ಕೂಡಾ ಉದ್ದೇಶಿಸಿದೆ. ಯಾವುದೇ ಪಠ್ಯಕ್ರಮವು ಚಲನಶೀಲವಾಗಿರಬೇಕು ಮಾತ್ರವಲ್ಲದೆ ಅದು ಶಾಲಾ ವ್ಯವಸ್ಥೆಯ ಬದಲಾಗುತ್ತಿರುವ ಬೇಡಿಕೆಗಳಿಗೆ ಸ್ಪಂದಿಸುವಂತಿರಬೇಕು. ಈ ಅಂಶವನ್ನಾಧರಿಸಿ ಮತ್ತು ಕ್ಷೇತ್ರ ಹಂತದ ಕಾರ್ಯನಿರ್ವಾಹಕರ ಹಿಮ್ಮಾಹಿತಿಗೆ ಸ್ಪಂದಿಸುತ್ತಾ, ಶಾಲೆಯ ಆಡಳಿತ ಮತ್ತು ಹಣಕಾಸಿಗೆ

ಸಂಬಂಧಿಸಿದ ಅಂಶಗಳನ್ನು ಒಳಗೊಂಡ 'ಶಾಲಾಡಳಿತವನ್ನು ಮುನ್ನೆಡೆಸುವುದು' ಎಂಬ ಹೊಸ ಪ್ರಧಾನ ಕ್ಷೇತ್ರವನ್ನು ಸೇರಿಸಲಾಗಿದೆ.

ಈ ದಾಖಲೆಯನ್ನು ಹೊರತಂದ ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರವನ್ನು ನಾನು ಅಭಿನಂದಿಸುತ್ತೇನೆ ಮತ್ತು ರಾಜ್ಯ ಸರಕಾರದ ಅಧಿಕಾರಿಗಳು, ಶಾಲಾ ಮುಖ್ಯಸ್ಥ/ ಮುಖ್ಯಸ್ಥೆಯರು ಮತ್ತು ಶಾಲಾಭಿವೃದ್ಧಿಗೆ ಸಂಬಂಧಿಸಿದ ಎಲ್ಲರಿಗೂ ಇದು ಉಪಯುಕ್ತವಾಗಿರುವುದೆಂದು ಆಶಿಸುತ್ತೇನೆ.

ನವ ದೆಹಲಿ — ಆರ್. ಗೋವಿಂದ
14 ಫೆಬ್ರವರಿ, 2014 — ಉಪ-ಕುಲಪತಿ

# ಕೃತಜ್ಞತೆಗಳು

ಶಾಲಾ ನಾಯಕರನ್ನು ಸೂಕ್ತ ತಜ್ಞರು, ಕೌಶಲ ಮತ್ತು ಮನೋಧೋರಣೆಗಳಿಂದ ಸಬಲೀಕರಿಸಿ, ಶಾಲೆಗಳಲ್ಲಿ ಪರಿವರ್ತನೆಯನ್ನು ತರುವ ಉದ್ದೇಶದಿಂದ ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರವನ್ನು (ರಾ.ಶಾ.ನಾ.ಕೇ) (National Centre for Schol Leadership (NCSL)), ನೀಪಾ (NIEPA) ಸಂಸ್ಥೆಯಲ್ಲಿ ಸ್ಥಾಪಿಸಲಾಗಿದೆ. ರಾ.ಶಾ.ನಾ.ಕೇ.ವು ಶಾಲಾ ನಾಯಕತ್ವ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ವಿನ್ಯಾಸ, ರಚನೆ ಮತ್ತು ಪಠ್ಯಕ್ರಮ ಚೌಕಟ್ಟು ರಚನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ರಾ.ಶಾ.ನಾ.ಕೇಂದ್ರದ ಎಲ್ಲಾ ಚಟುವಟಿಕೆಗಳಿಗೆ ಬೆಂಬಲ ನೀಡಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಅದನ್ನು ಸಶಕ್ತಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸಿದ ಮಾನವ ಸಂಪನ್ಮೂಲ ಸಚಿವಾಲಯಕ್ಕೆ ನಾವು ಹೃತ್ಪೂರ್ವಕವಾಗಿ ಅಭಾರಿಯಾಗಿದ್ದೇವೆ.

ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರ, ರಾಷ್ಟ್ರೀಯ ಸಂಪನ್ಮೂಲ ಕೇಂದ್ರ, ರಾಜ್ಯ ಸರಕಾರಗಳು ಮತ್ತು ರಾಜ್ಯ ಸಂಪನ್ಮೂಲ ಕೇಂದ್ರಗಳ ನಡುವೆ ಸಹಕ್ರಿಯೆಯನ್ನು ಸಾಧಿಸಿದ ಬಳಿಕ ರಾಷ್ಟ್ರ ಮತ್ತು ರಾಜ್ಯ ಮಟ್ಟಗಳಲ್ಲಿ ನಡೆಸಿದ ಚರ್ಚೆ, ಸಭೆ ಮತ್ತು ಸಮಾಲೋಚನೆಗಳ ಫಲಶೃತಿಯಾಗಿ ಈ ದಾಖಲೆಯು ಹೊರಹೊಮ್ಮಿದೆ. ಈ ಚೌಕಟ್ಟಿನ ರಚನೆಯ ಪ್ರತಿ ಹಂತದಲ್ಲಿ ಬೆಂಬಲ, ಮಾರ್ಗದರ್ಶನ ಮತ್ತು ಪ್ರೋತ್ಸಾಹ ಒದಗಿಸಿದ ಪ್ರತಿಯೊಬ್ಬ ಸದಸ್ಯರಿಗೂ ನಾವು ಅಭಾರಿಯಾಗಿದ್ದೇವೆ.

ನಮ್ಮ ಉನ್ನತ ಮಾರ್ಗದರ್ಶಕರಾದ ಶ್ರೀಯುತ ಆದಿತ್ಯ ನಟರಾಜ್, ಶ್ರೀಯುತ ಸುಶೀಲ್ ಬಾತ್ರ ಮತ್ತು ಶ್ರೀಮತಿ ಶಶಿ ಮೆಂಡಿರಟ್ಟರವರಿಗೆ ನಮ್ಮ ವಿಶೇಷ ಧನ್ಯವಾದಗಳು.

ಕೇಂದ್ರವು ನ್ಯಾಶನಲ್ ಕಾಲೇಜ್ ಆಫ್ ಟೀಚಿಂಗ್ ಆಂಡ್ ಲೀಡರ್‌ಶಿಪ್ (NCTL, U.K.), ಅದರಲ್ಲೂ ವಿಶೇಷವಾಗಿ ಡಾ. ರಾಬಿನ್ ಅಟ್‌ಫೀಲ್ಡ್ ಮತ್ತು ಡಾ. ರಶ್ಮಿ ಸಿನ್ಹರವರೊಂದಿಗೆ ಬಹಳ ಆಪ್ತ ಸಹಯೋಗದೊಂದಿಗೆ ಕೆಲಸ ಮಾಡಿದೆ.

ಶ್ರೀಯುತ ಎಸ್.ಕೆ. ಭಟ್ನಾಗರ್, ಕು. ಅಲ್ಕ ನೇಗಿ ಮತ್ತು ಕು. ಗುರ್ಮೀತ್ ಸಾರಂಗ್‌ರವರು ಒದಗಿಸಿದ ಆಡಳಿತಾತ್ಮಕ ಸೇವೆಗಳಿಗಾಗಿ ಧನ್ಯವಾದಗಳು.

ಈ ದಾಖಲೆಯನ್ನು ವಿನ್ಯಾಸಗೊಳಿಸಿದ ಡಿಜಿಟಲ್ ಎಕ್ಸ್‌ಪ್ರೆಶನ್‌ನ ಶ್ರೀಯುತ ಅಟನು ರಾಯ್, ಶ್ರೀಯುತ ರಾಜೇಶ್ ಹಂಡ ಮತ್ತು ಶ್ರೀಯುತ ಬಿರೇಂದರ್ ಸಿಂಗ್ ನೇಗಿಯವರ ಕೊಡುಗೆಯನ್ನು ನಾವಿಲ್ಲಿ ಸ್ಮರಿಸುತ್ತೇವೆ.

ನ್ಯೂಪದ ನಮ್ಮ ಸಂಪಾದಕೀಯ ಮತ್ತು ಪ್ರಕಟಣಾ ತಂಡದ ಎಲ್ಲರಿಗೂ, ವಿಶೇಷವಾಗಿ ಶ್ರಿಯುತ. ಸೋಮನಾಥ್ ಸರ್ಕಾರ್, ಶ್ರೀಯುತ ಪ್ರಮೋದ್ ರಾವತ್, ಮತ್ತು ಶ್ರೀಯುತ ಅಮಿತ್ ಸಿಂಘಾಲ್‌ರವರಿಗೆ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

# ವಿಷಯಾನುಕ್ರಮಣಿಕೆ


**ಮುನ್ನುಡಿ** III

**ಕೃತಜ್ಞತೆಗಳು** V

**1. ಪ್ರಸ್ತಾವನೆ** **1**

ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರ 2

**2. ಕಾರ್ಯಾಚರಣೆಯ ಚೌಕಟ್ಟು** **4**

ರಾಷ್ಟ್ರ ಮಟ್ಟದಲ್ಲಿ 4

ರಾಜ್ಯ ಮಟ್ಟದಲ್ಲಿ 5

**3. ಶಾಲಾ ನಾಯಕತ್ವ ಕ್ರಮಕ್ಕೆ ಮಾರ್ಗೋಪಾಯ** **6**

ಉಪಾಂಗ–1: ಪಠ್ಯಕ್ರಮ ಮತ್ತು ಸಾಮಗ್ರಿ ಅಭಿವೃದ್ಧಿ 6

ಉಪಾಂಗ–2: ಸಾಮರ್ಥ್ಯಾಭಿವೃದ್ಧಿ 7

ಉಪಾಂಗ 3: ಸಂಪರ್ಕಜಾಲ ನಿರ್ಮಾಣ ಮತ್ತು ಸಾಂಸ್ಥಿಕ ನಿರ್ಮಾಣ 9

ಉಪಾಂಗ 4: ಸಂಶೋಧನೆ ಮತ್ತು ಅಭಿವೃದ್ಧಿ 10

**4. ಶಾಲಾ ನಾಯಕತ್ವ ಅಭಿವೃದ್ಧಿಗೆ ಚೌಕಟ್ಟು** **11**

ಉನ್ನತ ಗುರಿ 12

ಮಾರ್ಗದರ್ಶಿ ತತ್ವಗಳು 12

ಪಠ್ಯಕ್ರಮ ಅನುಷ್ಠಾನ 12

**5. ಪ್ರಮುಖ ಕ್ಷೇತ್ರಗಳು** **13**

ಪ್ರಮುಖ ಕ್ಷೇತ್ರ 1: ಶಾಲಾ ನಾಯಕತ್ವದ ದೃಷ್ಟಿಕೋನ 15

ಪ್ರಮುಖ ಕ್ಷೇತ್ರ 2: ಸ್ವ ಅಭಿವೃದ್ಧಿ 17

ಪ್ರಮುಖ ಕ್ಷೇತ್ರ 3: ಬೋಧನೆ–ಕಲಿಕೆ ಪ್ರಕ್ರಿಯೆಗಳ ಪರಿವರ್ತನೆ 18

ಪ್ರಮುಖ ಕ್ಷೇತ್ರ 4: ತಂಡ ನಿರ್ಮಾಣ ಮತ್ತು ಮುನ್ನಡೆಸುವುದು 20

ಪ್ರಮುಖ ಕ್ಷೇತ್ರ 5: ನಾವಿನ್ಯತೆಯನ್ನು ಮುನ್ನಡೆಸುವುದು 21

ಪ್ರಮುಖ ಕ್ಷೇತ್ರ 6: ಪಾಲುದಾರಿಕೆಗಳನ್ನು ಮುನ್ನಡೆಸುವುದು 22

**ವಿಶೇಷ ಗಮನ ಕೇಂದ್ರಿತ ಕ್ಷೇತ್ರಗಳು** **25**

**ಸಾಮಗ್ರಿ ಅಭಿವೃದ್ಧಿ ಅಳವಡಿಕೆಗಳು ಮತ್ತು ಸಾಂದರ್ಭೀಕರಣ** **28**

# ಪ್ರಸ್ತಾವನೆ

ಇಂದು ಶಾಲೆಗಳು ಹಿಂದೆಂದಿಗಿಂತಲೂ ಹೆಚ್ಚಾಗಿ ಸಾರ್ವಜನಿಕ ಕ್ಷೇತ್ರದ ಮೂಂಚೂಣಿಯಲ್ಲಿವೆ– ಆದುದರಿಂದ ಶಾಲೆಗಳು ಹೆಚ್ಚು ಸಬಲೀಕರಣಗೊಂಡ ಸಮಾಜದ ನಿರೀಕ್ಷೆಗಳ ಮಟ್ಟಕ್ಕೆ ಬರುವಂತೆ ಬದಲಾಗುವುದು ಇಂದಿನ ತುರ್ತಾಗಿದೆ. ಶಾಲೆಗಳು ಪರಿವರ್ತನೆಗೊಳ್ಳಬೇಕು ಎಂಬ ಅರಿವು ಶಾಲಾ ಮುಖ್ಯಸ್ಥರ ಮೇಲೆ ನಿರ್ವಾಹಕರಾಗಿ ಮತ್ತು ನಾಯಕರಾಗಿ ಹೆಚ್ಚಿನ ಜವಾಬ್ದಾರಿಗಳನ್ನು ತಂದಿಡುತ್ತದೆ.

ನಮ್ಮ ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ, ಶಾಲಾ ನಾಯಕತ್ವ ಅಭಿವೃದ್ಧಿಗೆ ಒಂದು ವ್ಯವಸ್ಥಿತವಾದ ಮಾರ್ಗೋಪಾಯವು ಶಿಕ್ಷಣ ಕುರಿತು ಹಕ್ಕು ಆಧಾರಿತ ಮಾರ್ಗೋಪಾಯದ ಹಿನ್ನಲೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ–ಶಿಕ್ಷಣಕ್ಕೆ ಸಮಾನ ಅವಕಾಶಗಳು, ಗುಣಮಟ್ಟದ ಶಿಕ್ಷಣದ ಹಕ್ಕು, ಆನಂದದಾಯಕ ಕಲಿಕಾಪರಿಸರದ ಹಕ್ಕು– ಇವೆಲ್ಲದರ ಸಾಧನೆಯು ಶಾಲಾ ಪರಿವರ್ತನೆಯಲ್ಲಿ ತೊಡಗಿಸಿಕೊಂಡಿರುವ ಶಾಲಾ ನಾಯಕತ್ವದ ಮೇಲೆ ಅವಲಂಬಿತವಾಗಿದೆ.

ಸೀಮಿತ ಸಂಪನ್ಮೂಲಗಳು, ಪೋಷಕರ ಮತ್ತು ಸಮುದಾಯದ ಹೆಚ್ಚಿನ ನಿರೀಕ್ಷೆಗಳು– ಇಂತಹ ಕ್ಲಿಷ್ಟ ಸನ್ನಿವೇಶಗಳಲ್ಲಿ ಕೆಲಸ ಮಾಡುತ್ತಿರುವ ಶಾಲೆಗಳಿಗೆ ನಾಯಕತ್ವವು ಇನ್ನೂ ಹೆಚ್ಚು ಮುಖ್ಯವಾಗುತ್ತದೆ. ಇದು ಶಾಲಾ ನಾಯಕರುಗಳು, ಶಾಲೆಗಳು ಎದುರಿಸುತ್ತಿರುವ ಸವಾಲುಗಳನ್ನು ಮತ್ತು ಪ್ರಸ್ತುತ ಸ್ಥಿತಿಯಲ್ಲಿ ಶಾಲೆಗೆ ಲಭ್ಯವಿರುವ ಅವಕಾಶಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲು ಸಮೃದ್ಧ ಕೌಶಲ ಮತ್ತು ಜ್ಞಾನಗಳೊಂದಿಗೆ ಸಜ್ಜುಗೊಳಿಸಿ ಅವರನ್ನು ಸಶಕ್ತಗೊಳಿಸುವುದನ್ನು ಅಪೇಕ್ಷಿಸುತ್ತದೆ. ಈ ಹಿನ್ನಲೆಯಲ್ಲಿ ಶಾಲಾ ಮುಖ್ಯಸ್ಥರಲ್ಲಿ, ಶಿಕ್ಷಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಮತ್ತು ನಾವಿನ್ಯತೆಯನ್ನು ಪ್ರೋತ್ಸಾಹಿಸಲು ಮತ್ತು ಆ ಮೂಲಕ ಶಾಲೆಗಳನ್ನು 'ಉತ್ಕೃಷ್ಟತೆಯ ಕೇಂದ್ರಗಳನ್ನಾಗಿ' ಪರಿವರ್ತನೆ ಮಾಡಲು ಅವರನ್ನು ಸಜ್ಜುಗೊಳಿಸುವ ಸಂರಚನೆ ಮತ್ತು ಪ್ರಕ್ರಿಯೆಗಳನ್ನು ರೂಪಿಸುವುದು ಮುಖ್ಯವಾಗುತ್ತದೆ.

ಶಾಲೆಗಳು ಪ್ರತ್ಯೇಕತೆಯಲ್ಲಿ ಅಸ್ತಿತ್ವದಲ್ಲಿರುವುದಿಲ್ಲ–ಅವುಗಳು ಅಸ್ತಿತ್ವದಲ್ಲಿರುವ ಮತ್ತು ಕಾರ್ಯಾಚರಿಸುತ್ತಿರುವ ಸಮಾಜದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಪ್ರತಿಬಿಂಬಿಸುತ್ತದೆ. ಆದುದರಿಂದ, ಶಾಲೆಗಳನ್ನು 'ಉತ್ಕೃಷ್ಟತೆಯ ಕೇಂದ್ರಗಳನ್ನಾಗಿ' ಪರಿವರ್ತನೆಗೊಳಿಸುವ ಗುರಿಹೊಂದಿರುವ ಶಾಲಾ ನಾಯಕತ್ವ ಕಾರ್ಯಕ್ರಮದಲ್ಲಿ ಈ ಬಹು ಮುಖ್ಯ ಸಾಮಾಜಿಕ ಆಯಾಮವನ್ನು ನಿರ್ಲಕ್ಷಿಸುವುದು ಕಷ್ಟವಾಗುತ್ತದೆ. ಇದು ಆಡಳಿತಾತ್ಮಕ ಮತ್ತು ನಿರ್ವಹಣಾತ್ಮಕ ಜವಾಬ್ದಾರಿಗಳನ್ನು ಮೀರಿದ ನಾಯಕತ್ವ ಪಾತ್ರದ ಸಂಪೂರ್ಣ ಪಲ್ಲಟವನ್ನು ಬಯಸುತ್ತದೆ. ಈ ಗ್ರಹಿಕೆಯೊಂದಿಗೆ, ಶಾಲಾ ಮುಖ್ಯಸ್ಥರನ್ನು ಶಾಲೆಯಲ್ಲಿನ ಬದಲಾವಣೆಯ ಒಟ್ಟು ಪ್ರಕ್ರಿಯೆಗಳ ಚಾಲನ ಶಕ್ತಿಯಾಗಿರುವರೆಂದು ಪರಿಗಣಿಸಲಾಗಿದೆ. ಆದುದರಿಂದ ಪರಂಪರಾಗತ ತರಬೇತಿ ಮಾದರಿಗಳ ಬದಲಾಗಿ ಶಾಲೆಯಲ್ಲಿನ ನೈಜ ಬದುಕಿನ ಸವಾಲುಗಳನ್ನು ಕೈಗೆತ್ತಿಕೊಳ್ಳುವ ಹಾಗೂ ದೀರ್ಘಕಾಲೀನ ಅಭಿವೃದ್ಧಿಯನ್ನು ಸಾಧಿಸುವ ಶಾಲಾ ಮುಖ್ಯಸ್ಥರ ಸಾಮರ್ಥ್ಯಾಭಿವೃದ್ಧಿಯು ಪರಿವರ್ತನೆಯ ಹಾದಿಯ ಪ್ರಪ್ರಥಮ ಹೆಜ್ಜೆಯಾಗಿದೆ. ಈ ನಿಟ್ಟಿನಲ್ಲಿ ಶಾಲಾ ನಾಯಕತ್ವ ಅಭಿವೃದ್ಧಿಯನ್ನು ರಾಷ್ಟ್ರಾದ್ಯಂತ ಶಾಲಾ ಶಿಕ್ಷಣದ ಎಲ್ಲಾ ಹಂತಗಳಲ್ಲಿ ದೀರ್ಘಕಾಲೀನ ಹಾಗೂ ನಿರಂತರ ನೆಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

## ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರ

ಸಾಮಾನ್ಯ ಶಾಲೆಗಳನ್ನು ಉತ್ಕೃಷ್ಟ ಶಾಲೆಗಳನ್ನಾಗಿ ಪರಿವರ್ತಿಸುವ, ಮತ್ತು ನಾಯಕತ್ವ ಅಭಿವೃದ್ಧಿಯ ಮೂಲಕ ಒಟ್ಟು ಶಾಲಾ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರುವ ಪ್ರಮುಖ ಗುರಿಯೊಂದಿಗೆ ಶಾಲಾ ನಾಯಕತ್ವದ ರಾಷ್ಟ್ರೀಯ ಕೇಂದ್ರವನ್ನು (ಶಾ.ನಾ.ರಾ.ಕೇ) ಸ್ಥಾಪಿಸಲಾಯಿತು. ಆದುದರಿಂದ ಶಾ.ನಾ.ರಾ.ಕೇ.ದ ಪ್ರಮುಖ ಆದ್ಯತೆಯು, ಶಾಲಾ ಪರಿವರ್ತನೆಗೆ ನಾಯಕತ್ವವನ್ನು ಸಜ್ಜುಗೊಳಿಸುವುದಾಗಿದೆ. ಇದು ಶಾಲಾ ಪರಿವರ್ತನೆಯ ನಿಟ್ಟಿನಲ್ಲಿ ಆಡಳಿತಗಾರರು ಮತ್ತು ವೃತ್ತಿಪರರ ನಿರಂತರ ತೊಡಗಿಸಿಕೊಳ್ಳುವಿಕೆ ಮತ್ತು ಎಲ್ಲಾ ಭಾಗೀದಾರರನ್ನು ಒಳಗೊಳ್ಳುವ ಸಹಭಾಗಿತ್ವದ ಪ್ರಯತ್ನಗಳನ್ನು ಒಳಗೊಂಡಿದೆ. ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರವು, ಶಾಲಾ ಶಿಕ್ಷಣದ ಒಂದು ಅತಿ ಮುಖ್ಯವಾದ ಈ ಕ್ಷೇತ್ರವನ್ನು ಸಮಗ್ರವಾಗಿ ರಾಷ್ಟ್ರಾದ್ಯಂತ ಕೈಗೆತ್ತಿಕೊಳ್ಳಲು ಬಯಸುತ್ತದೆ.



ರಾ.ಶಾ.ನಾ.ಕೇಂದ್ರವು ದೇಶಾದ್ಯಂತ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮದ ಮೂಲಕ ಶಾಲೆಗಳಲ್ಲಿನ ವೈವಿಧ್ಯತೆಯನ್ನು ಸಮರ್ಥವಾಗಿ ಹಿಡಿದಿಡಬಲ್ಲ ಮತ್ತು ಸುಲಭವಾಗಿ ಅಳವಡಿಸಿಕೊಳ್ಳಬಹುದಾದ ಒಂದು ಚೌಕಟ್ಟನ್ನು ಹೊರತರುವ ಆಶಯವನ್ನು ಹೊಂದಿದೆ. ಅದು ಎಲ್ಲಾ ಮಟ್ಟದ ಶಾಲೆಗಳು ಅಂದರೆ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಾಲೆಗಳನ್ನು ಮಾತ್ರವಲ್ಲದೆ ವಿವಿಧ ಆಡಳಿತವರ್ಗಗಳು ನಡೆಸುತ್ತಿರುವ ಶಾಲೆಗಳು, ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿರುವ ಶಾಲೆಗಳು, ವಿವಿಧ ಗಾತ್ರದ ಶಾಲೆಗಳು, ವಿಭಿನ್ನ ಶಾಲೆಗಳು, ಇಂತಹುದೇ ಮುಂತಾದ ಶಾಲೆಗಳನ್ನು ಒಳಗೊಳಿಸುವ ದೃಷ್ಟಿಯನ್ನು ಹೊಂದಿದೆ. ರಾ.ಶಾ.ನಾ.ಕೇ.ವು ದೇಶದ ಪ್ರತಿಯೊಂದು ಶಾಲೆಯನ್ನು ತಲುಪಿ ಪರಿವರ್ತನೆಯನ್ನು ತರುವ ಆದ್ಯಾದೇಶವನ್ನು ಅದರ ದೂರದರ್ಶಿತ್ವ ಮತ್ತು ಧ್ಯೇಯವು ಸ್ಪಷ್ಟವಾಗಿ ನಿರೂಪಿಸುತ್ತವೆ.

## ದೂರದರ್ಶಿತ್ವ

**ಪ್ರತಿ ಮಗುವೂ ಕಲಿಯುವ ಮತ್ತು ಪ್ರತಿ ಶಾಲೆಯೂ ಉತ್ಕೃಷ್ಟತೆಯನ್ನು ಸಾಧಿಸುವಂತಹ ಶಾಲಾ ಪರಿವರ್ತನೆಯನ್ನು ತರಲು ಹೊಸ ಪೀಳಿಗೆಯ ನಾಯಕರನ್ನು ಅಭಿವೃದ್ಧಿಪಡಿಸುವುದು.**

## ಧ್ಯೇಯ

**ಗುಣಮಟ್ಟದ ಶಿಕ್ಷಣವನ್ನು ಒದಗಿಸಲು ಸಾಂಸ್ಥಿಕ ನಿರ್ಮಾಣಕ್ಕಾಗಿ ಶಾಲಾ ಮಟ್ಟದಲ್ಲಿ ನಾಯಕತ್ವ ಸಾಮರ್ಥ್ಯವನ್ನು ಹೆಚ್ಚಿಸುವುದು.**





# ಕಾರ್ಯಾಚರಣೆಯ ಚೌಕಟ್ಟು

ಹೊಸ ಪೀಳಿಗೆಯ ನಾಯಕರನ್ನು ರೂಪಿಸುವ ಮೂಲಕ ಶಾಲೆಗಳನ್ನು ಪರಿವರ್ತಿಸುವ ದೂರದರ್ಶಿತ್ವವನ್ನು ಸಾಧಿಸುವ ನಿಟ್ಟಿನಲ್ಲಿ ರಾ.ಶಾ.ನಾ.ಕೇಂದ್ರವು ರಾಷ್ಟ್ರ ಹಾಗು ರಾಜ್ಯ ಸಂಸ್ಥೆಗಳ ನಡುವೆ ಸಹಕ್ರಿಯೆಯನ್ನು ರೂಪಿಸಿ ಸಂಘಟಿತ ಕಲಿಕಾ ಅನುಭವವನ್ನು ಪಡೆಯುತ್ತದೆ. ಇವುಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ವಿವರಿಸಲಾಗಿದೆ.




## ರಾಷ್ಟ್ರ ಮಟ್ಟದಲ್ಲಿ

ರಾ.ಶಾ.ನಾ.ಕೇಂದ್ರವು ಪ್ರೊ.ಆರ್. ಗೋವಿಂದ, ನ್ಯೂಪದ ಉಪ ಕುಲಪತಿಯವರ ನಾಯಕತ್ವದಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಅಲ್ಲದೆ, ತಜ್ಞ ಸದಸ್ಯರುಗಳನ್ನೊಳಗೊಂಡ ತಂಡಗಳಾದ ರಾಷ್ಟ್ರೀಯ ಸಲಹಾ ಗುಂಪು (National Advisory Group), ರಾಷ್ಟ್ರೀಯ ಸಂಪನ್ಮೂಲ ಗುಂಪು (National Resource Group) ಹಾಗೂ ಮಾರ್ಗದರ್ಶಿಗಳ ಮಾರ್ಗದರ್ಶನವನ್ನು ಕೂಡಾ ಪಡೆಯುತ್ತದೆ. ನ್ಯೂಪದ ರಾ.ಶಾ.ನಾ.ಕೇಂದ್ರ ತಂಡವು ರಾಷ್ಟ್ರ ಮಟ್ಟದಲ್ಲಿ ಶಾಲಾ ನಾಯಕತ್ವದ ಎಲ್ಲಾ ಆಯಾಮಗಳ ಮೇಲೆ ಕೆಲಸ ಮಾಡುತ್ತದೆ. ಅದು ತನ್ನ ಅಂತರಾಷ್ಟ್ರೀಯ ಪಾಲುದಾರರಾದ ನ್ಯಾಶನಲ್ ಕಾಲೇಜ್ ಫಾರ್ ಟೀಚಿಂಗ್ ಆಂಡ್ ಲೀಡರ್‌ಶಿಪ್, ನಾಟ್ಟಿಂಗ್‌ಹ್ಯಾಮ್, ಯುನೈಟೆಡ್ ಕಿಂಗ್‌ಡಮ್ ನೊಂದಿಗೆ, ಸಹಭಾಗಿತ್ವದ ನೆಲೆಯಲ್ಲಿ ಕೂಡಾ ಕೆಲಸ ಮಾಡುತ್ತದೆ.

## ರಾಜ್ಯ ಮಟ್ಟದಲ್ಲಿ

ಎಲ್ಲಾ ಚಟುವಟಿಕೆಗಳನ್ನು ಅಗತ್ಯಾಧಾರಿತ ಮತ್ತು ರಾಜ್ಯ/ಕೇಂದ್ರಾಡಳಿತ/ ರಾಷ್ಟ್ರ ಮಟ್ಟದ ಎಲ್ಲಾ ಭಾಗೀದಾರರನ್ನು ಒಳಗೊಂಡ, ಸಹಭಾಗಿತ್ವದ ನೆಲೆಯಲ್ಲಿ ನಡೆಸುವುದು ರಾ.ಶಾ.ನಾ. ಕೇ.ದ ಮಾರ್ಗೋಪಾಯವಾಗಿದೆ. ರಾಜ್ಯ ನಾಯಕತ್ವ ಅಭಿವೃದ್ಧಿಯ ಅನುಷ್ಠಾನವನ್ನು ಅಯಾ ರಾಜ್ಯ /ಕೇಂದ್ರಾಡಳಿತ ಪ್ರದೇಶದಲ್ಲಿರುವ ಸಂಸ್ಥೆಗಳೊಂದಿಗೆ ಸಂಪರ್ಕಜಾಲ ಹೊಂದುವುದರ ಮೂಲಕ ನಡೆಸಲಾಗುವುದು. ರಾಜ್ಯ ಪಾಲುದಾರರು, ರಾಜ್ಯ ಸಂಪನ್ಮೂಲ ಗುಂಪು (ರಾ.ಸಂ.ಗು.) ಎಂದು ಕರೆಯಲಾಗುವ ಶಾಲಾ ನಾಯಕತ್ವ ಅಭಿವೃದ್ಧಿಯ ಒಂದು ಮುಖ್ಯ ತಂಡ (ಕೋರ್ ಟೀಮ್)ವನ್ನು ರಚಿಸುತ್ತಾರೆ. ರಾಜ್ಯ –ನಿರ್ದಿಷ್ಟ ಕಾರ್ಯಕ್ರಮ ಮತ್ತು ಸಾಮಗ್ರಿಗಳ ತಯಾರಿ, ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳಿಗೆ ಬೆಂಬಲ, ರಾ.ಶಾ.ನಾ.ಕೇ, ನ್ಯೂಪಾಕ್ಕೆ ಸಂಬಂಧಿಸಿದ ನಾಯಕತ್ವ ಅಕಾಡೆಮಿಯ ನಿರ್ಮಾಣಕ್ಕೆ ವಿಮರ್ಶಾತ್ಮಕ ತಜ್ಞರ ಸಮೂಹವನ್ನು ಅಭಿವೃದ್ಧಿಪಡಿಸುವುದು– ಇವೆಲ್ಲವನ್ನು ರಾ.ಸಂ.ಗು. ಕೈಗೆತ್ತಿಕೊಳ್ಳುವುದೆಂದು ಅಪೇಕ್ಷಿಸಲಾಗಿದೆ. ಕೇಂದ್ರದ ಚಟುವಟಿಕೆಗಳಿಗೆ ಈ ನಾಯಕತ್ವ ಅಕಾಡೆಮಿಗಳು ಮತ್ತು ರಾ.ಸಂ.ಗು ಬೆಂಬಲ ನೀಡುವುವು. ಹೀಗೆ ಅಭಿವೃದ್ಧಿಯಾದ ಕಾರ್ಯಕ್ರಮವು ಎಲ್ಲಾ ರಾಜ್ಯಗಳಲ್ಲಿ ವೃತ್ತಿಪರ ಕಲಿಕಾ ಸಮುದಾಯ (ವೃ.ಕ.ಸ.)ಗಳನ್ನು ಹುಟ್ಟುಹಾಕುತ್ತದೆ– ಸಮ್ಮೇಳನ, ಜಾಲತಾಣಆಧಾರಿತ ಸಂವಾದಗಳು (ವೆಬಿನಾರ್) ಮತ್ತು ತರಗತಿ ಪಠ್ಯಾಧಾರಿತ ಕೋರ್ಸ್‌ಗಳ ಮೂಲಕ ನಿರಂತರ ವೃತ್ತಿಪರ ಅಭಿವೃದ್ಧಿಯನ್ನು ಸಾಧಿಸಲು ವೃತ್ತಿಪರ ಕಲಿಕಾ ಸಮುದಾಯಗಳನ್ನು ರಾ.ಶಾ.ನಾ.ಕೇ. ಮತ್ತು ನ್ಯೂಪದ ಸಂಪರ್ಕಜಾಲದೊಳಗೆ ತರಲಾಗುವುದು.

# ಶಾಲಾ ನಾಯಕತ್ವ ಕ್ರಮಕ್ಕೆ ಮಾರ್ಗೋಪಾಯ

ರಾ.ಶಾ.ನಾ.ಕೇಂದ್ರವು ನಾಯಕತ್ವ ಅಭಿವೃದ್ಧಿಯ ಮೂಲಕ ದೇಶಾದ್ಯಂತ ಶಾಲೆಗಳ ವೈವಿಧ್ಯತೆಗೆಳಗೆ ಸ್ಪಂದಿಸಲು ಸಾಧ್ಯವಾಗುವಂತಹ ಕಾರ್ಯಕ್ರಮ ಚೌಕಟ್ಟನ್ನು ಹೊರತರುವ ದೂರದರ್ಶಿತ್ವವನ್ನು ಹೊಂದಿದೆ. ಕಾರ್ಯಕ್ರಮವನ್ನು ಪ್ರಾಥಮಿಕ ಹಂತದಿಂದ ತೊಡಗಿ ಪದವಿ ಪೂರ್ವ ಹಂತದವರೆಗೆ; ವಿವಿಧ ರೀತಿಯ ಆಡಳಿತ ವ್ಯವಸ್ಥೆಯಡಿಯಲ್ಲಿರುವ ಶಾಲೆಗಳು, ವಿಭಿನ್ನ ಭೌಗೋಳಿಕ ಪ್ರದೇಶಗಳಲ್ಲಿರುವ ಶಾಲೆಗಳು, ಭಿನ್ನ ಶಾಲೆಯ ಗಾತ್ರ, ಇತ್ಯಾದಿಶಾಲೆಗಳನ್ನೊಳಗೊಳ್ಳುವಂತೆ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಹಕ್ಕು ಆಧಾರಿತ ಶಿಕ್ಷಣದ ಹಿನ್ನಲೆಯಲ್ಲಿ ಕಾರ್ಯಕ್ರಮವು ವಿಶೇಷ ಮಹತ್ವವನ್ನು ಪಡೆಯುತ್ತದೆ. ರಾ.ಶಾ.ನಾ.ಕೇಂದ್ರವು ಶಾಲಾ ನಾಯಕತ್ವ ಅಭಿವೃದ್ಧಿಯನ್ನು ಕೆಳಕಂಡ ನಾಲ್ಕು ಪ್ರಮುಖ ಉಪಾಂಗಗಳಲ್ಲಿ ಕಾರ್ಯತ್ಮಕ ಚಟುವಟಿಕೆಗಳನ್ನು ರೂಪಿಸುವ ಮೂಲಕ ಅರ್ಥೈಸುತ್ತದೆ. ಅವು ಪಠ್ಯಕ್ರಮ ಮತ್ತು ಸಾಮಗ್ರಿ ಅಭಿವೃದ್ಧಿ, ಸಾಮರ್ಥ್ಯಾಭಿವೃದ್ಧಿ, ಸಂಪರ್ಕಜಾಲ ನಿರ್ಮಾಣ ಮತ್ತು ಸಾಂಸ್ಥಿಕ ಅಭಿವೃದ್ಧಿ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ.

ಪಠ್ಯಕ್ರಮ ಮತ್ತು ಸಾಮಗ್ರಿ ಅಭಿವೃದ್ಧಿಯು ರಾಜ್ಯ ಸಂಪನ್ಮೂಲ ಗುಂಪು ಮತ್ತು ಶಾಲಾ ನಾಯಕರ ಸಾಮರ್ಥ್ಯಾಭಿವೃದ್ಧಿಗೆ ತಳಹದಿಯನ್ನು ಒದಗಿಸುತ್ತದೆ. ಸಂಪರ್ಕಜಾಲ ನಿರ್ಮಾಣ ಮತ್ತು ಸಂಶೋಧನೆಯನ್ನು ಸಮಾನಾಂತರ ಕೆಲಸದ ಕ್ಷೇತ್ರಗಳಾಗಿ ಪರಿಗಣಿಸಿ –ಈ ಮೂಲಕ ಶಾಲಾ ನಾಯಕತ್ವ ಅಭಿವೃದ್ಧಿಯನ್ನು ರೂಪಿಸಿ, ನಡೆಸಿ ಪ್ರಕ್ರಿಯೆಗಳ ಅಧ್ಯಯನ ಕೈಗೊಳ್ಳಲು ಸಂಪನ್ಮೂಲ ವ್ಯಕ್ತಿಗಳು ಮತ್ತು ಶಾಲಾ ನಾಯಕರನ್ನು ಜೊತೆಗೆ ತರಲಾಗುವುದು. ಪ್ರಮುಖ ಕ್ಷೇತ್ರಗಳ ಅಂತರ್–ಅವಲಂಬನೆಗೆ ಮನ್ನಣೆ ನೀಡಿ, ಕೇಂದ್ರದ ಕಾರ್ಯಕ್ರಮಾತ್ಮಕ ಚಟುವಟಿಕೆಗಳನ್ನು ಪಠ್ಯಕ್ರಮ ಅಭಿವೃದ್ಧಿ, ಕ್ಷೇತ್ರ ಮಟ್ಟದ ಪ್ರಯೋಗಗಳು, ಪುನರಾವಲೋಕನ ಮತ್ತು ಹಿಮ್ಮಾಹಿತಿಗಳ ನಡುವೆ ಸಹಕ್ರಿಯೆಯನ್ನು ಖಾತರಿಪಡಿಸುವಂತೆ ರೂಪಿಸಲಾಗಿದೆ. ಇದು ಹೊಸ ಜ್ಞಾನ, ವಿನ್ಯಾಸ, ಯೋಜನೆ ಮತ್ತು ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುವುದು, ಸಾಮಗ್ರಿಗಳನ್ನು ಹುಟ್ಟುಹಾಕುವುದು ಮತ್ತು ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗೆ ಪ್ರಸ್ತುತವೆನಿಸುವ ಕ್ರಿಯಾಯೋಜನೆಯನ್ನು ರೂಪಿಸುವುದಕ್ಕೆ ಸಹಾಯವಾಗುತ್ತದೆ. ಅಲ್ಲದೆ ಶಾಲಾ ನಾಯಕರ ಉದಯೋನ್ಮುಕ ವೃತ್ತಿಪರ ಕಲಿಕಾ ಸಮುದಾಯಗಳಗೆ ಬೆಂಬಲವನ್ನೊದಗಿಸುತ್ತದೆ.

## ಉಪಾಂಗ–1 ಪಠ್ಯಕ್ರಮ ಮತ್ತು ಸಾಮಗ್ರಿ ಅಭಿವೃದ್ಧಿ

ಶಾಲಾ ನಾಯಕತ್ವದ ಪಠ್ಯಕ್ರಮ ಚೌಕಟ್ಟು 21ನೇ ಶತಮಾನದ ಶಾಲೆಯ ಸಂದರ್ಭಗಳು ಮತ್ತು ಸವಾಲುಗಳ ಹಿನ್ನಲೆಯಲ್ಲಿ ಶಾಲಾ ಮುಖ್ಯಸ್ಥರ ವಿಕಸನ ಹೊಂದುತ್ತಿರುವ ಪಾತ್ರವನ್ನು ಪ್ರತಿಬಿಂಬಿಸುವ ಒಂದು ಸಮಗ್ರ ಹಾಗೂ ಸುಲಭವಾಗಿ ಅಳವಡಿಸಬಹುದಾದ

ದಾಖಲೆಯಾಗಿದೆ. ಪಠ್ಯಕ್ರಮ ಚೌಕಟ್ಟನ್ನು ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಪರಿಕಲ್ಪನೆ ಮತ್ತು ರೂಢಿಗಳಿಗೆ ಸಂಬಂಧಿಸಿದ ಏಳು ಪ್ರಮುಖ ಕ್ಷೇತ್ರಗಳ ಸುತ್ತ ರೂಪಿಸಲಾಗಿದೆ. ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಶಿಕ್ಷಣ ತಜ್ಞರು ಮತ್ತು ವೃತ್ತಿಪರರೊಂದಿಗೆ ರಾಷ್ಟ್ರ ಮಟ್ಟದ ಸಮಾಲೋಚನೆ ನಡೆಸಿದ ಬಳಿಕ ಈ ದಾಖಲೆಯನ್ನು ತಯಾರಿಸಲಾಗಿದೆ. ಈ ದಾಖಲೆಯನ್ನು ಎಂಟು ರಾಜ್ಯಗಳ ರಾಜ್ಯ ಸಂಪನ್ಮೂಲ ಗುಂಪಿನ ಸದಸ್ಯರು ಪರಿಶೀಲಿಸಿ ತಳಮಟ್ಟದ ಅಗತ್ಯಗಳು ಮತ್ತು ಶಾಲಾ ಮುಖ್ಯಸ್ಥರ ವಾಸ್ತವಗಳನ್ನು ಪರಿಗಣಿಸಿ ಸರಳೀಕೃತಗೊಳಿಸಲಾಗಿದೆ.

ಭಾರತದ ಶಾಲಾ ವ್ಯವಸ್ಥೆಯ ಶ್ರೀಮಂತ ವೈವಿಧ್ಯತೆಯನ್ನು ಗಣನೆಗೆ ತೆಗೆದುಕೊಂಡು, ಈ ಪಠ್ಯಕ್ರಮ ಚೌಕಟ್ಟನ್ನು ವಿವಿಧ ರಾಜ್ಯಗಳ ವಿಭಿನ್ನ ಸಂದರ್ಭಗಳಿಗೆ ತಕ್ಕಂತೆ ಅಳವಡಿಸಲಾಗುವುದು.

## ಉದ್ದೇಶಗಳು

- ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವುದು, ಪ್ರಸ್ತುತ ಮತ್ತು ಮುಂದಿನ ಶಾಲಾ ನಾಯಕರ ಅಗತ್ಯತೆಯನ್ನಾಧರಿಸಿ ಅತ್ಯುತ್ತಮವಾಗಿ ವಿನ್ಯಾಸಗೊಂಡ ಕಾರ್ಯಕ್ರಮಗಳನ್ನು ಸಂಘಟಿಸುವುದು.
- ಶಾಲಾ ನಾಯಕರಿಗೆ ಸಾಮಗ್ರಿ ಮತ್ತು ಸಂಪನ್ಮೂಲಗಳ ಸಂಪುಟವನ್ನು ರೂಪಿಸುವುದು.
- ವೈವಿಧ್ಯಮಯ ಶಾಲಾ ಸನ್ನಿವೇಶಗಳನ್ನಾಧರಿಸಿ ಸೂಕ್ತ ಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಅವುಗಳನ್ನು ವಿವಿಧ ಸ್ವರೂಪಗಳಲ್ಲಿ ಬಳಕೆಗೆ ಯೋಗ್ಯವಾಗುವಂತೆ ಸಂರಚಿಸಿಕೊಳ್ಳುವುದು.

## ಉಪಾಂಗ-2 ಸಾಮರ್ಥ್ಯಾಭಿವೃದ್ಧಿ

ಈ ಉಪಾಂಗವು ಶಾಲಾ ನಾಯಕರ ನಾಯಕತ್ವ ಅಭಿವೃದ್ಧಿಗೆ ಪ್ರಾಧಾನ್ಯತೆಯನ್ನು ನೀಡುತ್ತದೆ. ಕಾಲಾಂತರದಲ್ಲಿ ಅದು ರಾಜ್ಯ, ಜಿಲ್ಲೆ, ಕ್ಷೇತ್ರ ಮತ್ತು ಸಮೂಹಮಟ್ಟಗಳಲ್ಲಿ ನಾಯಕತ್ವ ತಂಡಗಳನ್ನು ಕಾರ್ಯಕ್ರಮದೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಅವರ ಸಾಮರ್ಥ್ಯಾಭಿವೃದ್ಧಿಯನ್ನು ವ್ಯವಸ್ಥಿತವಾಗಿ ಸಾಧಿಸುವ ಯೋಜನೆಯನ್ನು ಹೊಂದಿದೆ.

ಈ ಪಠ್ಯಕ್ರಮ ಚೌಕಟ್ಟಿನಲ್ಲಿ ಅಭಿವೃದ್ಧಿಪಡಿಸಿದ ಪ್ರಧಾನ ಕ್ಷೇತ್ರಗಳ ಸುತ್ತ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಸ್ತುತಗೊಳಿಸಿ, ಶಾಲಾ ನಾಯಕರಿಗಾಗಿ ಯೋಜಿಸಿ, ಅಗತ್ಯಾಧಾರಿತ ಕಾರ್ಯಕ್ರಮಗಳ ಮೂಲಕ ಸಬಲೀಕರಿಸುವ ರೀತಿಯಲ್ಲಿ ನೀಡಲಾಗುವುದು.

ಇಲ್ಲಿ ಪ್ರಕ್ರಿಯೆ ಆಧಾರಿತ ಮತ್ತು ಪ್ರಾಯೋಗಿಕ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಿದ್ದು, ತನ್ಮೂಲಕ ಪಡೆದ ಜ್ಞಾನ ಕೌಶಲಗಳನ್ನು ಅನ್ವಯಸಲು ಸಮರ್ಥಗೊಳಿಸುವಂತೆ ಯೋಜಿಸಿದೆ.

ಈ ಕಾರ್ಯಕ್ರಮವು ದೇಶಾದ್ಯಂತ ಬಹು, ಅಲ್ಪ ಕಾಲೀನ ಮತ್ತು ದೀರ್ಘ ಕಾಲೀನ ಘಟಕ ಆಧಾರಿತ ತರಬೇತಿಗಳ ಮೂಲಕ ಗುರಿ ಮತ್ತು ವಿಷಯ ನಿರ್ದಿಷ್ಟ ಅಗತ್ಯಗಳನ್ನಾಧರಿಸಿ ಅನುಷ್ಠಾನಗೊಳ್ಳುವುದು. ಶಾಲಾ ನಾಯಕರು ಶಾಲಾ ಸುಧಾರಣಾ ಪ್ರಕ್ರಿಯೆಯನ್ನು

ನಿರಂತರವಾಗಿ ಮುನ್ನೆಡೆಸುವ ನಿಟ್ಟಿನಲ್ಲಿ ಅವರ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸ ಬಯಸುತ್ತದೆ. ಮತ್ತು ರಾಜ್ಯ ಮತ್ತು ಜಿಲ್ಲಾ ಹಂತದ ಅಧ್ಯಾಪಕ ವರ್ಗವು ನಾಯಕತ್ವದ ಅಭಿವೃದ್ಧಿಗಾಗಿ ಅಗತ್ಯಾಧಾರಿತ ಕಾರ್ಯಕ್ರಮಗಳನ್ನು ಯೋಜಿಸಿ ಅನುಷ್ಠಾನಗೊಳಿಸುವ ಮೂಲಕ ಹೊಸ ವಿಧಾನಗಳ ಚಿಂತನೆಯಲ್ಲಿ ಸಕ್ರಿಯವಾಗಿ ತೊಡಗಿಸುವ ನಿರೀಕ್ಷೆಯನ್ನು ಹೊಂದಿದೆ.

## ಉದ್ದೇಶಗಳು

- ಶಾಲಾ ನಾಯಕರು ತಾವು ಕಾರ್ಯ ನಿರ್ವಾಹಕರೆಂಬ ಪಾತ್ರದ ಕುರಿತು ತಮಗಿರುವ ಪ್ರಸ್ತುತ ಗ್ರಹಿಕೆಯಿಂದ ಹೊರಬಂದು ತಾವು ಸಕ್ರಿಯ ಹಾಗು ಹೊಸ ಬದಲಾವಣೆಯ ನಾಯಕರಾಗಿದ್ದೇವೆಂಬ ಗ್ರಹಿಕೆಗೆ ಪಲ್ಲಟಗೊಳಿಸುವುದು.
- ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಾಯಕತ್ವ ಅಭಿವೃದ್ಧಿಯನ್ನು ಮುನ್ನಡೆಸಲು ಅಗತ್ಯವಿರುವ ಒಂದು ನಿರ್ಣಾಯಕ ಸಮೂಹವನ್ನು ಸಜ್ಜುಗೊಳಿಸುವುದು.
- ಶಾಲಾ ಮುಖ್ಯಸ್ಥರ ಸಾಮರ್ಥ್ಯವನ್ನು ವೈಯಕ್ತಿಕ ಮತ್ತು ವೃತ್ತಿಪರ ಅಭಿವೃದ್ಧಿ, ಕಲಿಕೆ-ಬೋಧನೆ, ಶಾಲಾ ವ್ಯವಸ್ಥೆಯ ಪ್ರಕ್ರಿಯೆಗಳಲ್ಲಿ ನಾವಿನ್ಯತೆ ಮತ್ತು ಪಾಲುದಾರಿಕೆಗಳ ಕ್ಷೇತ್ರದಲ್ಲಿ ಅಭಿವೃದ್ಧಿಪಡಿಸುವುದು.
- ಶಾಲಾ ಗುಣಮಟ್ಟವನ್ನು ವೃದ್ಧಿಸಲು ಸ್ಥಳೀಯ ಹಂತದ ನಾಯಕತ್ವ (ಎಸ್.ಡಿ.ಎಮ್.ಸಿ; ವಿ.ಇ.ಸಿ; ಪಿ.ಟಿ.ಎ;..) ಮತ್ತು ವ್ಯವಸ್ಥಾ ನಾಯಕತ್ವವನ್ನು ಸಧೃಢಗೊಳಿಸುವುದು.

ಶಾ.ನಾ.ರಾ.ಕೇ.ದ ಸೂಕ್ತ ಬೆಂಬಲದೊಂದಿಗೆ ಕಾರ್ಯಕ್ರಮಗಳ ತಲುಪಿಸುವಿಕೆಯು ರಾಜ್ಯಗಳ ಜವಾಬ್ದಾರಿಯಾಗಿರುತ್ತದೆ. ಪ್ರಕ್ರಿಯೆಯಾಧಾರಿತ ಸಾಮಗ್ರಿಗಳ ಮೂಲಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒತ್ತು ನೀಡಲಾಗುತ್ತದೆ-ಇದರಿಂದಾಗಿ ತಾವು ಪಡೆದ ಜ್ಞಾನ ಮತ್ತು ಕೌಶಲಗಳನ್ನು ಸ್ವತಃ ಅನ್ವಯಗೊಳಿಸಲು ಶಿಬಿರಾರ್ಥಿಗಳನ್ನು ಸಶಕ್ತಗೊಳಿಸಲಾಗುತ್ತದೆ. ಪಠ್ಯಕ್ರಮ ಚೌಕಟ್ಟು ಮತ್ತು ಸಾಮಗ್ರಿಗಳ ಸಾಂದರ್ಭೀಕರಣಕ್ಕೆ ಅವಕಾಶಗಳಿವೆ. ಪ್ರತಿ ರಾಜ್ಯದಿಂದ ಆಯ್ದ ಅತ್ಯುತ್ತಮ ನಾಯಕತ್ವ ಆಚರಣೆಗಳ ಪ್ರಕರಣ ಅಧ್ಯಯನಗಳನ್ನು ದಾಖಲಿಸಿ ವಿವಿಧ ಹಂತದ ಸಾಮರ್ಥ್ಯಾಭಿವೃದ್ಧಿಯಲ್ಲಿ ಸಂಪನ್ಮೂಲ ಸಾಮಗ್ರಿಯಾಗಿ ಬಳಸಲಾಗುವುದು.

ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳು ಶಾಲಾ ನಾಯಕತ್ವ ಅಭಿವೃದ್ಧಿಯ ಕುರಿತು ಇನ್ನೂ ವಿಶಾಲವಾದ ದೃಷ್ಟಿಕೋನಗಳಿಗೆ ಎಡೆ ಮಾಡಿ ಕೊಡುತ್ತದೆ. ಇದು ಶಾಲಾ ಹಂತದಲ್ಲೇ ಉನ್ನತ ಮಾರ್ಗದರ್ಶನ ಮತ್ತು ಕೋಚಿಂಗನ್ನು ರಾಜ್ಯ ಸಂಪನ್ಮೂಲ ಗುಂಪಿನಿಂದ ಗುರುತಿಸಲ್ಪಟ್ಟ ಸುಗಮಕಾರು ಅಥವಾ ತಜ್ಞರಿಂದ ಒದಗಿಸುತ್ತದೆ.

## ಉಪಾಂಗ 3: ಸಂಪರ್ಕಜಾಲ ನಿರ್ಮಾಣ ಮತ್ತು ಸಾಂಸ್ಥಿಕ ಅಭಿವೃದ್ಧಿ

ರಾ.ಶಾ.ನಾ.ಕೇಂದ್ರವು ರಾಜ್ಯಗಳೊಂದಿಗೆ ದೀರ್ಘಕಾಲೀನ ತೊಡಗಿಸಿಕೊಳ್ಳುವಿಕೆಯನ್ನು ಸಂಸ್ಥೆಗಳು, ವೃತ್ತಿಪರರು ಮತ್ತು ಪ್ರತಿ ರಾಜ್ಯದೊಳಗಿನ ತಜ್ಞರೊಂದಿಗಿನ ಸಂಪರ್ಕಜಾಲ ಏರ್ಪಡಿಸುವ ಮೂಲಕ ಪರಿಕಲ್ಪಿಸುತ್ತದೆ. ಇದರಿಂದಾಗಿ ದೇಶದ ಎಲ್ಲಾ ರಾಜ್ಯಗಳ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸಲಾಗುವುದು. ಪ್ರತಿಯೊಂದು ಶಾಲೆಯೂ ಪರಿವರ್ತನಾತ್ಮಕ ಕಾರ್ಯಸೂಚಿಯನ್ನು ಅನುಸರಿಸುವುದು ಇಲ್ಲಿ ಅಗತ್ಯವಾಗುತ್ತದೆ. ಪರಿಣಾಮವಾಗಿ ರಾ.ಶಾ.ನಾ.ಕೇಂದ್ರದ ಕಾರ್ಯಕ್ರಮವು ಈಗಾಗಲೇ ರಾಜ್ಯದಲ್ಲಿ ಶಾಲಾ ನಾಯಕತ್ವ ಕ್ಷೇತ್ರದಲ್ಲಿ ತೊಡಗಿಸಿಕೊಂಡಂತಹ ಅಥವಾ ಆ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಬಯಸುವ ಹಾಗೂ ರಾಜ್ಯ ಸಂಪನ್ಮೂಲ ಗುಂಪಿನೊಂದಿಗೆ ಮತ್ತು ರಾಜ್ಯ, ಜಿಲ್ಲೆ, ಕ್ಷೇತ್ರ ಮತ್ತು ಸಮೂಹ ಮಟ್ಟದ ಅಧಿಕಾರಿ ವರ್ಗ/ಸಂರಚನೆಗಳೊಂದಿಗೆ ಕೆಲಸ ಮಾಡಲು ಬಯಸುವ ಸರಕಾರಿ ಮತ್ತು ಸರಕಾರೇತರ ವೃತ್ತಿಪರ ಸಂಸ್ಥೆಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳುವುದು. ಇವುಗಳು ಶಾಲಾ ನಾಯಕತ್ವ ಅಭಿವೃದ್ಧಿಯನ್ನು ತಲುಪಿಸಲು ಸಂಸ್ಥೆಗಳಿಗೆ ವ್ಯವಸ್ಥಾ ಸಾಮರ್ಥ್ಯ ನಿರ್ಮಾಣದತ್ತ ಸಾಗಲು ಸಹಾಯ ಮಾಡುವುದು.

ರಾ.ಶಾ.ನಾ.ಕೇಂದ್ರವು ಪ್ರತಿ ರಾಜ್ಯದಲ್ಲಿ, ರಾಜ್ಯ ಸಂಪನ್ಮೂಲ ಗುಂಪು ಮತ್ತು ಆಯ್ದ ಜಿಲ್ಲೆಗಳಲ್ಲಿರುವ ಇತರ ಬೆಂಬಲ ಸಂಸ್ಥೆಗಳೊಂದಿಗೆ (Anchor Institutions) ಹಾಗೂ ಒಂದು ನೋಡಲ್ ಸಂಸ್ಥೆಯ ಮೂಲಕ ಕಾರ್ಯಾಚರಿಸುತ್ತದೆ. ನೋಡಲ್ ಸಂಸ್ಥೆಯು ಇತರ ಬೆಂಬಲ ಸಂಸ್ಥೆಗಳೊಂದಿಗೆ ರಾಜ್ಯಮಟ್ಟದಲ್ಲಿ ನಾಯಕತ್ವ ಅಕಾಡೆಮಿಯಾಗಿ ಪರಿವರ್ತನೆಯಾಗುವುದೆಂದು ಮುಂಗಾಣಲಾಗಿದೆ. ನಾಯಕತ್ವ ಅಕಾಡೆಮಿಯು ರಾ.ಶಾ.ನಾ. ಕೇಂದ್ರದ ವಿಸ್ತೃತ ಅಂಗವಾಗಿ ಕಾರ್ಯವೆಸಗುತ್ತದೆ. ನಾಯಕತ್ವ ಅಕಾಡೆಮಿಯು ನೇರವಾಗಿಯೂ ಹಾಗೂ ಕಾರ್ಯಕ್ರಮದ ಅವಶ್ಯಕತೆಗಳಿಗನುಗುಣವಾಗಿ ಮತ್ತು ಸೂಕ್ತ ಸಂಸ್ಥೆಗಳ ಲಭ್ಯತೆಯನ್ನು ಅವಲಂಬಿಸಿ ಜಿಲ್ಲಾ ಮತ್ತು ಕ್ಷೇತ್ರ ಮಟ್ಟದ ಸಂಸ್ಥೆಗಳೊಂದಿಗಿನ ಸಂಪರ್ಕಜಾಲದ ಮೂಲಕ ಕೆಲಸ ಮಾಡುತ್ತದೆ. ಪ್ರತಿ ರಾಜ್ಯದಲ್ಲಿ ನಾಯಕತ್ವ ಆಕಾಡೆಮಿ ಮತ್ತು ರಾಜ್ಯ ಸಂಪನ್ಮೂಲ ತಂಡಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

### ಉದ್ದೇಶಗಳು

- ರಾಜ್ಯ ಸರಕಾರಗಳೊಂದಿಗೆ ಸಮಾಲೋಚಿಸಿ, ನಾಯಕತ್ವ ಅಕಾಡೆಮಿಗಳನ್ನು ಸ್ಥಾಪಿಸುವುದು ಮತ್ತು ರಾ.ಶಾ.ನಾ.ಕೇಂದ್ರ ಮತ್ತು ನಾಯಕತ್ವ ಅಕಾಡೆಮಿಗಳ ನಡುವೆ ಸಮನ್ವಯತೆ ಸಾಧಿಸುವುದು.
- ಶಾಲಾ ನಾಯಕರು ಮತ್ತು ಶಾಲೆಗಳೊಂದಿಗೆ ಸಮೂಹ, ಕ್ಷೇತ್ರ ಮತ್ತು ಜಿಲ್ಲಾಮಟ್ಟಗಳಲ್ಲಿ ಹಾಗೂ ಎಸ್.ಡಿ.ಎಮ್.ಸಿ ಮತ್ತು ಇತರ ಸಮುದಾಯದ ಸದಸ್ಯರೊಂದಿಗೆ ಅನ್ಯೋನ್ಯವಾಗಿ ಕೆಲಸ ಮಾಡುತ್ತಿರುವ ತಳ ಮಟ್ಟದ (ಕ್ಷೇತ್ರ ಮಟ್ಟದ) ಆಡಳಿತಗಾರರೊಂದಿಗೆ ಸಂಪರ್ಕವೇರ್ಪಡಿಸುವುದು.
- ದೇಶದಲ್ಲಿ ನಾಯಕತ್ವ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಂಘಟಿತ ಕಲಿಕಾ ಅನುಭವವನ್ನು ಕ್ರೋಢೀಕರಿಸಿ, ಜಿಲ್ಲೆ, ರಾಜ್ಯ ಮತ್ತು ವಲಯದಾದ್ಯಂತ ವೃತ್ತಿಪರ ಕಲಿಕಾ ಸಮುದಾಯವನ್ನು ರೂಪಿಸುವುದು.

ಸಂಪರ್ಕಜಾಲ ನಿರ್ಮಾಣ ಮತ್ತು ನಾಯಕತ್ವ ಅಕಾಡೆಮಿಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ ಇತರ ಸಂಸ್ಥೆ ಮತ್ತು ರಾಜ್ಯ ಸರಕಾರಗಳೊಂದಿಗೆ ಚರ್ಚೆ ಮತ್ತು ಸಂವಾದಗಳನ್ನು ರಾ.ಶಾ.ನಾ.ಕೇಂದ್ರವು ಮುನ್ನಡೆಸುತ್ತದೆ. ಪ್ರತಿ ನಾಯಕತ್ವ ಅಕಾಡೆಮಿಯನ್ನು ರಾಜ್ಯದ ವಿವಿಧ ಭೌಗೋಳಿಕ ವಲಯಗಳಲ್ಲಿ ಉನ್ನತ ಕಲಿಕೆಯ ಆಯ್ದ ಸಂಸ್ಥೆಗಳಲ್ಲಿ ಸ್ಥಾಪಿಸಲಾಗುತ್ತದೆ. ಅಕಾಡೆಮಿಯು ರಾಜ್ಯ/ಕೇಂದ್ರಾಡಳಿತ ಪ್ರದೇಶದ ಶಿಕ್ಷಣ ಇಲಾಖೆ ಮತ್ತು ಎಲ್ಲಾ ರಾಜ್ಯ ಸಂಪನ್ಮೂಲ ಗುಂಪಿನ ತಂಡಗಳೊಂದಿಗೆ ಸಹಭಾಗಿತ್ವದ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತದೆ. ನಾಯಕತ್ವ ಅಕಾಡೆಮಿಯು ತನ್ನ ಸದಸ್ಯರ ಸಹಾಯವನ್ನು ಅಥವಾ ಸ್ಥಳೀಯ ತಜ್ಞರ ತಂಡ/ಶಾಲಾ ಮುಖ್ಯಸ್ಥರ, ಸ್ವಯಂ ಸೇವಕರ, ನಿವೃತ್ತ ಶಾಲಾ ಮುಖ್ಯಸ್ಥರ ಅಥವಾ ಶಾಲಾಭಿವೃದ್ಧಿಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವ ಸಮುದಾಯದ ಸದಸ್ಯರ ಸಹಾಯವನ್ನು ಪಡೆಯಬಹುದು. ಅಂತಹ ವೃತ್ತಿಪರ ನೆಲೆಯಲ್ಲಿ ಸಂವಾದ ಮಾಡುವ ಸಮುದಾಯವು ಪರಸ್ಪರ ಸಂಪರ್ಕಜಾಲ ನಿರ್ಮಾಣ ಮಾಡಿ ಸಮೂಹ, ಕ್ಷೇತ್ರ ಮತ್ತು ಜಿಲ್ಲಾ ಮಟ್ಟಗಳಲ್ಲಿ ಉತ್ತಮ ಆಚರಣೆಗಳನ್ನು, ಅನುಭವಜನ್ಯ ಮತ್ತು ಪರಸ್ಪರ ಕಲಿಕೆಯನ್ನು ಹಂಚಿಕೊಳ್ಳಲು ವೃತ್ತಿಪರ ಕಲಿಕಾ ಸಮುದಾಯವನ್ನು (ವೃ. ಕ.ಸ.) ರೂಪಿಸುತ್ತಾರೆ. ಕಾಲಾನಂತರದಲ್ಲಿ ವೃ.ಕ.ಸ ಗಳ ಸಂಪರ್ಕಜಾಲವನ್ನು ಜಿಲ್ಲೆಗಳು, ರಾಜ್ಯಗಳು ಮತ್ತು ವಲಯಗಳಲ್ಲಿ ಹಾಗೂ ಕೇಂದ್ರದೊಂದಿಗೆ ಅಭಿವೃದ್ಧಿಪಡಿಸುವುದು ಇಲ್ಲಿಯ ಯೋಜನೆಯಾಗಿದೆ.

## ಉಪಾಂಗ 4: ಸಂಶೋಧನೆ ಮತ್ತು ಅಭಿವೃದ್ಧಿ

ತಿಳುವಳಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸುವುದು ಮತ್ತು ಶಾಲಾ ನಾಯಕತ್ವದ ಕ್ಷೇತ್ರದಲ್ಲಿ ಹೊಸ ಜ್ಞಾನವನ್ನು ಹುಟ್ಟುಹಾಕುವುದು–ಇವೆರಡಕ್ಕೂ ಸಂಶೋಧನೆ ಮತ್ತು ಅಭಿವೃದ್ಧಿಯ ಅಗತ್ಯವಿದೆ. ಇದು ಶಾಲಾಧಾರಿತ ಪರಿವರ್ತನೆಗೆ ಪಠ್ಯಕ್ರಮ ಅಭಿವೃದ್ಧಿ ಮತ್ತು ಇತರ ಮಧ್ಯವರ್ತನೆಗಳ ಕುರಿತು ಮಾಹಿತಿ ನೀಡುವುದು. ಇತರ ಸಂಶೋಧನಾ ಸಂಸ್ಥೆಗಳೊಂದಿಗೆ ಮತ್ತು ಸ್ವತಂತ್ರ ತಜ್ಞರೊಂದಿಗೆ ಸಹಯೋಜಿತ ಸಂಶೋಧನಾ ಅಧ್ಯಯನ ನಡೆಸಲು ಕೇಂದ್ರವು ಸಹಯೋಗ ಏರ್ಪಡಿಸುತ್ತದೆ.

### ಉದ್ದೇಶಗಳು

- ಅತ್ಯುತ್ತಮ ನಾಯಕತ್ವ ಆಚರಣೆಗಳ ಸಂಗ್ರಹ, ದಾಖಲೀಕರಣ ಮತ್ತು ಪ್ರಸರಣ.
- ಭಾರತದ ಸಂದರ್ಭದಲ್ಲಿ ಶಾಲಾ ನಾಯಕತ್ವ ಕ್ಷೇತ್ರಕ್ಕೆ ಹೊಸ ಜ್ಞಾನದ ಕೊಡುಗೆ ನೀಡುವುದು.

ಸಮಗ್ರ ಶಾಲಾ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮಗಳು ಅದರ ಅನುಷ್ಠಾನಕ್ಕಾಗಿ ಪಠ್ಯಕ್ರಮ ಚೌಕಟ್ಟು ಮತ್ತು ಒಂದು ಕೈಪಿಡಿಯಿಂದ ಮಾರ್ಗದರ್ಶನ ಪಡೆಯುತ್ತದೆ. ಈ ಮುಂದಿನ ಭಾಗದಲ್ಲಿ ಪಠ್ಯಕ್ರಮ ಚೌಕಟ್ಟನ್ನು ವಿವರವಾಗಿ ನೀಡಲಾಗಿದೆ.

# ಶಾಲಾ ನಾಯಕತ್ವ ಅಭಿವೃದ್ಧಿಗೆ ಚೌಕಟ್ಟು

ಕೇಂದ್ರವು ಶಾಲಾ ನಾಯಕತ್ವ ಅಭಿವೃದ್ಧಿಗೆ ಪಠ್ಯಕ್ರಮ ಚೌಕಟ್ಟನ್ನು ಅದರ ಪ್ರಮುಖ ಕಾರ್ಯದ ಭಾಗವಾಗಿ ವಿನ್ಯಾಸಗೊಳಿಸಿದೆ. ನಾಯಕರು ಶಾಲೆಯನ್ನು ಪರಿವರ್ತಿಸುವುದರಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ ಎಂಬ ಅಂಶವನ್ನು ಪಠ್ಯಕ್ರಮವು ಮಾನ್ಯ ಮಾಡುತ್ತದೆ. ಆದುದರಿಂದ ಇಲ್ಲಿಯ ಪ್ರಮುಖ ಉದ್ದೇಶವೆಂದರೆ ಶಾಲಾ ನಾಯಕರನ್ನು ಜ್ಞಾನ, ಕೌಶಲ ಮತ್ತು ಆತ್ಮವಿಶ್ವಾಸದೊಂದಿಗೆ ಸಬಲೀಕರಣ ಮಾಡಿ ಅವರನ್ನು ಜವಬ್ದಾರಿವಹಿಸಲು ಸಜ್ಜುಗೊಳಿಸುವುದಾಗಿದೆ. ಅಲ್ಲದೆ ಅವರು ಎದುರಿಸುವ ಪ್ರತಿಯೊಂದು ಸಮಸ್ಯೆಯನ್ನು "ಹೌದು ನನಗೆ ಸಾಧ್ಯವಿದೆ, ನಾನು ಮಾಡುತ್ತೇನೆ" ಎಂಬ ಮನೋಧೋರಣೆಯೊಂದಿಗೆ ಸವಾಲಾಗಿ ಸ್ವೀಕರಿಸುವುದರೊಂದಿಗೆ , ಮೊದಲುಗೊಂಡು "ನಮಗೆ ಸಾಧ್ಯವಿದೆ, ನಾವು ಮಾಡುತ್ತೇವೆ" ಎಂಬಲ್ಲಿಗೆ ಚಲಿಸಿ "ಪ್ರತಿ ಮಗು ಕಲಿಯುತ್ತದೆ ಮತ್ತು ಪ್ರತಿ ಶಾಲೆಯು ಉತ್ಕೃಷ್ಟತೆಯನ್ನು ಸಾಧಿಸುತ್ತದೆ" ಎಂದು ಖಾತರಿಪಡಿಸುವಲ್ಲಿಗೆ ಬರುವುದು. ಶಾಲಾ ನಾಯಕರು ತಮ್ಮಲ್ಲಿ ತಾವು ನಂಬಿಕೆಯಿಟ್ಟು ತಮ್ಮ ವೈಯಕ್ತಿಕ ಮತ್ತು ವೃತ್ತಿಪರ ಕೌಶಲಗಳನ್ನು ಅಭಿವೃದ್ಧಿಗೊಳಿಸುವುದು; ತಮ್ಮ ಬೋಧನೆ–ಕಲಿಕಾ ಕಾರ್ಯತಂತ್ರಗಳನ್ನು ಉತ್ತಮಪಡಿಸಿ ತಮ್ಮ ಸಹ ಶಿಕ್ಷಕರನ್ನು ಮುನ್ನಡೆಸುವುದು; ಮಗುವಿನ ಹಕ್ಕಿನ ಕುರಿತು ಜಾಗೃತರಾಗುವುದು ಮತ್ತು ಭಾಗೀದಾರರೊಂದಿಗೆ ಪರಿಣಾಮಕಾರಿ ಪಾಲುದಾರಿಕೆಯನ್ನು ರೂಪಿಸುವುದು– ಈ ದೃಷ್ಟಿಕೋನವನ್ನಿಟ್ಟು ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರದ ಪಠ್ಯಕ್ರಮವನ್ನು ರೂಪಿಸಲಾಗಿದೆ.

## ಉನ್ನತ ಗುರಿ

ವಿದ್ಯಾರ್ಥಿ ಕಲಿಕೆ ಮತ್ತು ಅಭಿವೃದ್ಧಿಯನ್ನು ಉತ್ತಮಪಡಿಸುವೆಡೆ ಗಮನ ಹರಿಸುವ ನಿಟ್ಟಿನಲ್ಲಿ ಶಾಲೆಯನ್ನು ಪರಿವರ್ತನೆಗೊಳಿಸಲು ಶಾಲಾ ಮುಖ್ಯಸ್ಥರನ್ನು ಸಶಕ್ತಗೊಳಿಸುವುದು.

## ಮಾರ್ಗದರ್ಶಿ ತತ್ವಗಳು

ಎಲ್ಲಾ ಶಾಲಾ ನಾಯಕರು ತಮ್ಮ ವೃತ್ತಿಯಲ್ಲಿ ಬೆಳೆಯುವ ಮತ್ತು ಉತ್ಕೃಷ್ಟ ಸಾಧನೆ ಮಾಡುವ ಬಯಕೆಯನ್ನು ಹೊಂದಿರುವವರು. ವಯಸ್ಕರು ಭಿನ್ನ ರೀತಿಯಲ್ಲಿ ಕಲಿಯುತ್ತಾರೆ ಎಂಬ ನಂಬಿಕೆಯ ಮೇಲೆ ಪಠ್ಯಕ್ರಮ ಚೌಕಟ್ಟನ್ನು ರಚಿಸಲಾಗಿದೆ. ಶಾಲಾ ನಾಯಕರು ತಮ್ಮ ಕಲಿಕಾ ಶೈಲಿ ಮತ್ತು ಗತಿಗೆ ಅನುಗುಣವಾಗಿ ಕಲಿಯಲು ಸೂಕ್ತ ಸಾಮಗ್ರಿಗಳನ್ನು ಬಳಸಬಹುದಾಗಿದೆ. ಪಠ್ಯಕ್ರಮ ಚೌಕಟ್ಟು ಸ್ಥಾಪಿತ ಸೈದ್ಧಾಂತಿಕ ತತ್ವಗಳಿಂದ ಪ್ರೇರೇಪಿತವಾಗಿದ್ದರೂ, ಅದರ ವಸ್ತು ಮತ್ತು ಪ್ರಕ್ರಿಯೆಗಳು ಶಾಲಾ ನಾಯಕತ್ವ ಆಚರಣೆಯಲ್ಲಿ ಆಳವಾಗಿ ಬೇರೂರಿದೆ. ಈ ಚೌಕಟ್ಟು ಆಡಳಿತಗಾರರು, ಸಮುದಾಯ ಮತ್ತು ಶಿಕ್ಷಕರೊಂದಿಗಿನ ಮುಖ್ಯಶಿಕ್ಷಕರ ಸಂವಾದವು ಚಲನಶೀಲವಾಗಿದ್ದು ನಿರಂತರವಾಗಿ ವಿಕಸನಗೊಳ್ಳುವ ಪ್ರಕ್ರಿಯೆಯಾಗಿದೆ ಎಂಬ ನಂಬಿಕೆಯಾಧಾರದಲ್ಲಿ ರೂಪುಗೊಂಡಿದೆ.

## ಅನುಷ್ಠಾನ

ಈ ಚೌಕಟ್ಟು ಶಾಲಾ ನಾಯಕರ ಸಾಮರ್ಥ್ಯಾಭಿವೃದ್ಧಿಗೆ ಭಾಗೀದಾರಿಕೆಯ ವಿಧಾನವನ್ನು ಅಳವಡಿಸಿದೆ. ಪಠ್ಯಕ್ರಮವನ್ನು ಅನುಷ್ಠಾನಗೊಳಿಸುವ ವಿಧಾನ ಮತ್ತು ಮಾರ್ಗೋಪಾಯಗಳಾಗಿ ಅನುಭವಜನ್ಯ ಕಲಿಕೆ, ಉನ್ನತ ಮಾರ್ಗದರ್ಶನ, ವಿಮರ್ಶಾತ್ಮಕ ಚಿಂತನೆ ಮತ್ತು ಕ್ಷೇತ್ರ ಮಟ್ಟದ ತೊಡಗಿಸಿಕೊಳ್ಳುವಿಕೆಯನ್ನು ಒಳಗೊಂಡಿವೆ. ಈ ಚೌಕಟ್ಟನ್ನು ನಿರಂತರವಾಗಿ ಸಂಸ್ಕರಿಸಿ ಮತ್ತು ಉತ್ತಮೀಕರಿಸಿ ಶಾಲಾ ನಾಯಕರ ಮತ್ತು ಸುಗಮಕಾರರ ನೈಜ ಅನುಭಗಳ ಹತ್ತಿರಕ್ಕೆ ತರುವ ಆಶಯವನ್ನು ಹೊಂದಿದೆ.

# ಪ್ರಧಾನ ಕ್ಷೇತ್ರಗಳು

ಪಠ್ಯಕ್ರಮ ಚೌಕಟ್ಟು ಪ್ರಾಥಮಿಕ ಶಾಲೆಗಳಲ್ಲಿ ಶಾಲಾ ನಾಯಕತ್ವದ ಅಭಿವೃದ್ಧಿಯ ಗುರಿಯನ್ನು ಸಾಧಿಸಲು ಅಗತ್ಯವಿರುವ ವಿವಿಧ ಉಪಾಂಗಗಳನ್ನು ಆಧರಿಸಿದ ಏಳು ಪ್ರಧಾನ ಕ್ಷೇತ್ರಗಳ ರೂಪುರೇಷೆಯನ್ನು ಅನಾವರಣಗೊಳಿಸುತ್ತದೆ. ಶಾಲಾ ಪರಿವರ್ತನೆ ಮತ್ತು ಶಾಲಾ ನಾಯಕರ ವೃತ್ತಿಪರ ಬೆಳವಣಿಗೆಗೆ ಅಗತ್ಯವಿರುವ ಈ ಪ್ರಮುಖ ಕ್ಷೇತ್ರಗಳಿಗೆ ಸ್ಪಷ್ಟವಾಗಿ ವ್ಯಾಖ್ಯಾನಿಸಲ್ಪಟ್ಟ ಉದ್ದೇಶಗಳು ಮತ್ತು ಪಠ್ಯವಸ್ತು ಕ್ಷೇತ್ರಗಳಿವೆ.



ಶಾಲಾ ಪರಿವರ್ತನೆಯ ಕುರಿತು ಒಂದು ಸಮಗ್ರ ದೃಷ್ಟಿಕೋನ ಹಾಗೂ ಈ ಗುರಿಯನ್ನು ಸಾಧಿಸುವಲ್ಲಿ ಶಾಲಾ ನಾಯಕರು ವಹಿಸುವ ಪಾತ್ರ –ಇವುಗಳನ್ನು ರೂಪಿಸುವ ಹಿನ್ನಲೆಯಲ್ಲಿ ಎಲ್ಲಾ ಏಳು ಪ್ರಧಾನ ಕ್ಷೇತ್ರಗಳು ಒಂದಕ್ಕೊಂದು ಅನ್ಯೋನ್ಯವಾಗಿ ಬೆಸೆದುಕೊಂಡಿವೆ ಹಾಗೂ ಶಾಲೆಯು ಒಂದು ಕಲಿಕಾ ಸಂಸ್ಥೆಯಾಗಿದ್ದು ಇದು ಸಕ್ರಿಯವಾಗಿ ಮಕ್ಕಳನ್ನು ಪೋಷಿಸಿ ಅವರ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸುಗಮಗೊಳಿಸುತ್ತದೆ ಎಂಬ ಅಂಶವನ್ನು ಈ ಚೌಕಟ್ಟು ಪರಿಗಣಿಸಿದೆ. ಪಠ್ಯಕ್ರಮವು ಶಾಲಾ ಮುಖ್ಯಸ್ಥರಲ್ಲಿ ಧನಾತ್ಮಕ ಸ್ವ – ಪರಿಕಲ್ಪನೆ ಹಾಗೂ ಸಮಾನತೆ ಮತ್ತು ತಾರತಮ್ಯರಹಿತ ತತ್ವಗಳಿಂದ ಪ್ರೇರಣೆಗೊಂಡ ಚಿಂತನಾಶೀಲ ವೃತ್ತಿಪರರನ್ನು ರೂಪಿಸುವ ಸಾಮರ್ಥ್ಯಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ.

ಭಾರತದ ವೈವಿಧ್ಯಮಯ ಶಾಲಾ ಸಂದರ್ಭಗಳ ಹಿನ್ನಲೆಯಲ್ಲಿ ಈ ಚೌಕಟ್ಟು ವಿಶೇಷ ಗಮನದ ಕ್ಷೇತ್ರಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅನ್ವೇಷಿಸಲು ಅವಕಾಶವನ್ನೊದಗಿಸುತ್ತದೆ–ಇದರಿಂದ ಪರ್ವತಶ್ರೇಣಿ, ಮರುಭೂಮಿ ಮತ್ತು ಬುಡಕಟ್ಟು ಪ್ರದೇಶಗಳು; ಭಾರೀ ಮಳೆಯಿಂದಾಗಿ ಪ್ರತಿ ವರ್ಷ ಪ್ರವಾಹಕ್ಕೀಡಾಗುವ ಪ್ರದೇಶಗಳು ಅಥವಾ ಸಾಮಾಜಿಕ ಸಂಘರ್ಷಕ್ಕೆ ತುತ್ತಾಗುವ ಪ್ರದೇಶಗಳು ಅಥವಾ ಮಾನವ ನಿರ್ಮಿತ ಅಥವಾ ನೈಸರ್ಗಿಕ ಅನಾಹುತಗಳಿಗೆ ತುತ್ತಾಗುವ ಪ್ರದೇಶಗಳ ಸವಾಲುಗಳನ್ನು ಇಲ್ಲಿ ಅರ್ಥಮಾಡಿಕೊಳ್ಳಲಾಗಿದೆ. ಹಾಗೆಯೇ ಸಣ್ಣ ಮತ್ತು ಬಹು ಶ್ರೇಣಿ ಶಾಲೆಗಳು ಎದುರಿಸುತ್ತಿರುವ ಸವಾಲುಗಳು ಕೂಡಾ ವಿಶೇಷ ಗಮಕ್ಕೆ ಅರ್ಹವಾಗಿವೆ.

## ಪ್ರಧಾನ ಕ್ಷೇತ್ರ 1: ಶಾಲಾ ನಾಯಕತ್ವದ ದೃಷ್ಟಿಕೋನ

ಇದು ನಾಯಕತ್ವವನ್ನು ಮತ್ತು ಶಾಲೆಯ ಪರಿವರ್ತನೆಯಲ್ಲಿ ಅದರ ಪ್ರಭಾವವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಅದು ಶಾಲೆಯನ್ನು ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ; ಪ್ರಯೋಗ ಹಾಗೂ ಬದಲಾವಣೆಗೆ ನಿರಂತರ ವೇದಿಕೆಯನ್ನು ಒದಗಿಸುವ ಕಲಿಕಾ ಸಂಸ್ಥೆಯನ್ನಾಗಿ ಅರ್ಥ ಮಾಡಿಕೊಳ್ಳಲು ಒಂದು ಪರಿಕಲ್ಪನಾತ್ಮಕ ತಿಳಿಕೆವಳಿಕೆಯನ್ನು ರೂಪಿಸುತ್ತದೆ. ಇದು ಶಾಲೆಯ ಬದಲಾವಣೆ ಮತ್ತು ಪರಿವರ್ತನೆಗಾಗಿ ಒಂದು ದೂರದರ್ಶಿತ್ವವನ್ನು ರೂಪಿಸುವಲ್ಲಿ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ.

### ಉದ್ದೇಶ

- ಶಾಲಾ ನಾಯಕತ್ವವನ್ನು ಅರ್ಥಮಾಡಿಕೊಳ್ಳುವುದು ಮತ್ತು ಬದಲಾವಣೆ ಹಾಗೂ ಸುಧಾರಣೆಗೆ ಒಂದು ಕಾಣ್ಕೆಯನ್ನು ರೂಪಿಸುವುದು.

**ಘಟಕ 1: ಕಲಿಕಾ ಸಂಸ್ಥೆಯಾಗಿ ಶಾಲೆ**

- ಸಾಮಾಜಿಕ ಸಂಸ್ಥೆಯಾಗಿ ಶಾಲೆ
- ಒಂದು ಸಂಸ್ಥೆಯಾಗಿ ಶಾಲೆಯ ಚಲನಶೀಲ ಸ್ವರೂಪ
- ಶಾಲೆಯಲ್ಲಿನ ಅಂತರ್-ಕ್ರಿಯಾತ್ಮಕ ಪ್ರಕ್ರಿಯೆಗಳು.
- ಕಲಿಕೆ ಮತ್ತು ಅಭಿವೃದ್ಧಿಯ ತಳಹದಿಯಾಗಿ ಶಾಲೆ.

**ಘಟಕ 2: ಶಾಲಾ ನಾಯಕತ್ವ: ಬಹು ಪಾತ್ರಗಳು ಮತ್ತು ಅಸ್ಮಿತೆಗಳು**

- ದೂರದರ್ಶಿಯಾಗಿ ನಾಯಕ
- ಬದಲಾವಣೆಯ ಹರಿಕಾರನಾಗಿ ನಾಯಕ.
- ಪ್ರೇರಣಾತ್ಮಕ, ಸಧೃಢ, ಜನ ಕೇಂದ್ರಿತ ಮತ್ತು ನಿರಂತರ ಕಲಿಕಾರ್ಥಿಯಾಗಿ ನಾಯಕ
- ಚಿಂತನಾಶೀಲ ವೃತ್ತಿನಿರತನಾಗಿ ನಾಯಕ
- ಶಾಲಾ ಪರಿಣಾಮಕಾರತ್ವವನ್ನು ಉತ್ತಮಗೊಳಿಸುವಲ್ಲಿ ನಾಯಕತ್ವದ ಮಹತ್ವ.

**ಘಟಕ 3: ಶಾಲೆಗಾಗಿ ದೂರದರ್ಶಿತ್ವವನ್ನು ರೂಪಿಸುವುದು.**

- ಶಾಲಾ ಪರಿವರ್ತನೆಗೆ ಕಾಣ್ಕೆಯನ್ನು ರೂಪಿಸುವುದು.
- ಸಂದರ್ಭ ಮತ್ತು ಅಡೆತಡೆಗಳನ್ನು ಮಾಪನ ಮತ್ತು ಅರ್ಥ ಮಾಡಿಕೊಳ್ಳುವುದು.
- ಶಾಲಾಭಿವೃದ್ಧಿ ಯೋಜನೆಯ ಮೂಲಕ ದೂರದರ್ಶಿತ್ವವನ್ನು ಸಾಕಾರಗೊಳಿಸುವುದು.
- ಪುನರ್ಮನನ ಮತ್ತು ಪರಿಷ್ಕರಣೆಗಳ ಮೂಲಕ ಬದಲಾವಣೆಯ ಮೇಲೆ ಗಮನವಿಡುವುದು.

### ಘಟಕ 4: ಪರಿವರ್ತನೆಯನ್ನು ಅರ್ಥ ಮಾಡಿಕೊಳ್ಳುವುದು

- ಶಾಲಾ ಪರಿವರ್ತನೆಗೆ ಮಾರ್ಗದರ್ಶಿ ತತ್ವಗಳು: ಒಳಗೊಳ್ಳುವಿಕೆ, ಸಮಾನತೆ ಮತ್ತು ಗುಣಮಟ್ಟ.
- ಸಮೂಹ ಸಂಘಟನೆಯಾಗಿ ಶಾಲೆ: ಶಾಲಾ ಬದಲಾವಣೆಗೆ ವಿಚಾರಗಳು, ಸಾಮರ್ಥ್ಯಗಳು ಮತ್ತು ಗುರಿಗಳು.
- ತನ್ನನ್ನು ತಾನು ಪರಿವರ್ತನೆಗೊಳಿಸುವಲ್ಲಿನ ಚಲನಶೀಲತೆ: ಮನೋಧೋರಣೆ ಮತ್ತು ಕ್ರಿಯೆಗಳು; ಚಿಂತನೆ ಮತ್ತು ಮಂಥನ ಹಾಗೂ ಪೋಷಕರು, ಶಿಕ್ಷಕರು ಮತ್ತು ಸಮುದಾಯದ ಸದಸ್ಯರೊಂದಿಗೆ ತೊಡಗಿಸಿಕೊಳ್ಳುವುದು.
- ಬದಲಾವಣೆಯನ್ನು ನಿಭಾಯಿಸುವುದು: ಎದುರಿಸಿದ ಪ್ರತಿರೋಧ ಮತ್ತು ಸೃಷ್ಟಿಯಾದ ಅವಕಾಶಗಳು.

### ಘಟಕ 5: ಮಗು ಮೊದಲು

- ಬಾಲ್ಯವನ್ನು ಅರ್ಥಮಾಡಿಕೊಳ್ಳುವುದು.
- ಮಗುವಿನ ಸಮಗ್ರ ಅಭಿವೃದ್ಧಿ.
- ಸಮಾನತೆ, ತಾರತಮ್ಯರಹಿತತೆಯನ್ನು ಆಚರಿಸುವುದು ಮತ್ತು ಎಲ್ಲರಿಗೂ ಗೌರವ.
- ಶಾಲೆಯಲ್ಲಿ ಮಗುವಿನ ಹಕ್ಕುಗಳು.
- ಸುರಕ್ಷತೆ ಮತ್ತು ಭದ್ರತೆಯತಾಣವಾಗಿ ಶಾಲೆ.

### ಘಟಕ 6: ಕೆಲಸದ ಕಾರ್ಯ ಶೈಲಿಯನ್ನು ಪರಿವರ್ತನೆಮಾಡುವುದು.

- ಗುರಿಯನ್ನು ಗಮನದಲ್ಲಿಟ್ಟು ಅದರತ್ತ ಕಾರ್ಯಪ್ರವೃತ್ತರಾಗುವುದು.
- ಬಹು ದೃಷ್ಟಿಕೋನಗಳನ್ನು ಸ್ವೀಕರಿಸುವುದು ಮತ್ತು ಅವುಗಳಿಗೆ ಅವಕಾಶ ನೀಡುವುದು.
- ಅರ್ಥಪೂರ್ಣ ಸಂವಾದಕ್ಕೆ ಪ್ರಕ್ರಿಯೆಗಳನ್ನು ಸೃಷ್ಟಿಸುವುದು.
- ಬದಲಾವಣೆ ಮತ್ತು ತಿದ್ದಿಕೊಳ್ಳಲು ಮುಕ್ತರಾಗಿರುವುದು.
- ಸಂಘಟಿತ ಬದ್ಧತೆಯ ಪ್ರಜ್ಞೆಯನ್ನು ಪೋಷಿಸುವುದು.

## ಪ್ರಧಾನ ಕ್ಷೇತ್ರ 2: ಸ್ವ ಅಭಿವೃದ್ಧಿ

ಸಾಮರ್ಥ್ಯ, ಧೋರಣೆ, ಮತ್ತು ಮೌಲ್ಯಗಳು; ಚಿಂತನಾತ್ಮಕ ಸಂವಾದದ ಮೂಲಕ ಗುರುತಿಸಲ್ಪಟ್ಟ ಸ್ವ-ಸುಧಾರಣೆಯ ಕ್ಷೇತ್ರಗಳು ಹಾಗೂ ನಿರಂತರ ಕಲಿಕೆ, ತನಗೆ ಮತ್ತು ಇತರರಿಗೆ ಅವಕಾಶಗಳನ್ನು ಸೃಷ್ಟಿಸುವುದು-ಇವುಗಳಿಗೆ ಸಂಬಂಧಿಸಿದಂತೆ ಧನಾತ್ಮಕ ಸ್ವ ವ್ಯಕ್ತಿತ್ವ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸುವುದು ಈ ಕ್ಷೇತ್ರದ ಪ್ರಮುಖ ಗಮನವಾಗಿದೆ.

### ಉದ್ದೇಶ

- ತನ್ನತನವನ್ನು ಅರಿಯುವುದು, ಶಾಲೆ ಮತ್ತು ಇತರರೊಂದಿಗೆ ತನ್ನತನದ ಸಂಬಂಧ, ಮತ್ತು ತನ್ನತನವನ್ನು ಅಭಿವೃದ್ಧಿಪಡಿಸುವುದು

**ಘಟಕ 1: ತನ್ನತನವನ್ನು ಅರ್ಥ ಮಾಡಿಕೊಳ್ಳುವುದು.**

- ತನ್ನನ್ನು ತಾನು ಅರ್ಥ ಮಾಡಿಕೊಳ್ಳುವುದು: ಒಬ್ಬ ವ್ಯಕ್ತಿಯಾಗಿ ಮತ್ತು ಶಾಲೆಯಲ್ಲಿ ವೃತ್ತಿಪರನಾಗಿ.
- ವೃತ್ತಿ ಜೀವನದ ಅರ್ಥ ಮತ್ತು ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು.
- ಧನಾತ್ಮಕ ಸ್ವ ಪರಿಕಲ್ಪನೆ ಮತ್ತು ಸ್ವ ಮಾನ್ಯತೆಯನ್ನು ಅಭಿವೃದ್ಧಿಪಡಿಸುವುದು.

**ಘಟಕ 2: ಇತರೊಂದಿಗಿನ ಸಂಬಂಧದಲ್ಲಿ ತನ್ನತನ**

- ಶಾಲೆಯ ಸಮಾಜಿಕ ಸಂದರ್ಭದಲ್ಲಿ ತನ್ನನ್ನು ಗುರುತಿಸಿಕೊಳ್ಳುವುದು.
- ಪರಸ್ಪರ ಸಂಘರ್ಷಿಸುವ ನಿರೀಕ್ಷೆಗಳು ಮತ್ತು ಬಹು ಪಾತ್ರ ಗ್ರಹಿಕೆಗಳನ್ನು ನಿಭಾಯಿಸುವುದು.
- ಪ್ರಭಾವ ವಲಯ ಮತ್ತು ಕಾಳಜಿ ವಲಯ.

**ಘಟಕ 3: ಶಾಲಾ ಸಂದರ್ಭದಲ್ಲಿ ತನ್ನತನ**

- ಸ್ವ-ಅಭಿವೃದ್ಧಿ ಮತ್ತು ಸಾಂಸ್ಥಿಕ ಗುರಿಗಳ ಸಮ್ಮಿಳನ/ಸಂಗಮ
- ಶಾಲಾ ಕಾರ್ಯಗಳಿಗೆ ಸಂಬಂಧಿಸಿದಂತೆ ಬಹು ಪಾತ್ರಗಳು.
- ವೃತ್ತಿಪರ ಗುರಿಗಳು ಮತ್ತು ಆಚರಣೆಯನ್ನು ಹೊಂದಿಸುವುದರೆಡೆಗೆ ಚಿಂತನೆ.

**ಘಟಕ 4: ವೃತ್ತಿಪರ ಸ್ವಂತಿಕೆಯನ್ನು ಅಭಿವೃದ್ಧಿಪಡಿಸುವುದು.**

- ಜನರೊಂದಿಗೆ ಕಾರ್ಯ ನಿರ್ವಹಿಸುವುದು ಮತ್ತು ಗುರುತಿಸಿಕೊಳ್ಳುವುದು
- ಸಾಮಾಜಿಕ ಕಲಿಕೆ ಮತ್ತು ಒಗ್ಗೂಡಿ ಬೆಳೆಯುವ ತಾಣವಾಗಿ ಶಾಲೆ.
- ಸಂಘಟಿತ ಜವಾಬ್ದಾರಿ, ಸಾಮಾಜಿಕ ಮತ್ತು ನೈತಿಕ ಪ್ರಜ್ಞೆಯನ್ನು ಹುಟ್ಟುಹಾಕುವುದು.

## ಪ್ರಧಾನ ಕ್ಷೇತ್ರ 3: ಬೋಧನೆ–ಕಲಿಕೆ ಪ್ರಕ್ರಿಯೆಗಳ ಪರಿವರ್ತನೆ

ಇದು ನಾಯಕರಲ್ಲಿ ಬೋಧನೆ–ಕಲಿಕೆ ಪ್ರಕ್ರಿಯೆಯನ್ನು ಪರಿವರ್ತನೆ ಮಾಡುವ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದಾಗಿದೆ. ಶಾಲೆಯು ಅನ್ವೇಷಣೆ ಮತ್ತು ಸೃಜನಶೀಲತೆಗೆ ತಾಣವಾಗಿದೆ ಎಂದು ಅರ್ಥಮಾಡಿಕೊಂಡು ತರಗತಿ ಪ್ರಕ್ರಿಯೆಗಳನ್ನು ಹೆಚ್ಚು ಸೃಜನಶೀಲ ಮತ್ತು ಶಿಶು ಕೇಂದ್ರಿತವನ್ನಾಗಿ ಮಾಡುವುದರ ಮೂಲಕ ಸಾಧಿಸಬಹುದಾಗಿದೆ. ಈ ದಿಶೆಯಲ್ಲಿ, ಇದು ಶಾಲಾ ಮುಖ್ಯಸ್ಥರ ಸಾಮರ್ಥ್ಯಗಳನ್ನು, ಅವರ ಶಾಲೆಯ ಬೋಧನೆ–ಕಲಿಕೆ ಪ್ರಕ್ರಿಯೆಗಳನ್ನು ಪರಿವರ್ತಿಸುವೆಡೆಗೆ ಅಭಿವೃದ್ಧಿಪಡಿಸುತ್ತದೆ.

### ಉದ್ದೇಶ

- **ಬೋಧನೆ–ಕಲಿಕೆ ಪ್ರಕ್ರಿಯೆಗಳನ್ನು ಸೃಜನಾತ್ಮಕ ಶಿಶು ಕೇಂದ್ರಿತ ತೊಡಗಿಸುಕೊಳ್ಳುವಿಕೆಯನ್ನಾಗಿ ಪರಿವರ್ತನೆ ಮಾಡುವುದು.**

**ಘಟಕ 1: ಶಾಲೆ ಮತ್ತು ಶಿಕ್ಷಣದ ಉದ್ದೇಶ**

- ಅನ್ವೇಷಣಾ ಪ್ರವೃತ್ತಿಯನ್ನು ಉತ್ತೇಜಿಸುವುದು.
- ವಿಮರ್ಶಾತ್ಮಕ ಚಿಂತನೆಗೆ ಶಿಕ್ಷಣ.
- ಸಬಲೀಕರಣಕ್ಕಾಗಿ ಶಿಕ್ಷಣ.
- ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವುದು.

**ಘಟಕ 2: ಶಿಶು ಕೇಂದ್ರಿತ ಬೋಧನ ವಿಧಾನವನ್ನು ಅರ್ಥ ಮಾಡಿಕೊಳ್ಳುವುದು.**

- ಬೆಳೆಯುತ್ತಿರುವ ಮಗುವಿನ ಕಲಿಕಾ ಮತ್ತು ಅಭಿವೃದ್ಧಿಯ ಅಗತ್ಯಗಳು.
- ಸಕ್ರಿಯ ಕಲಿಕಾರ್ಥಿಯಾಗಿ ಮತ್ತು ಜ್ಞಾನದ ಕರ್ತೃವಾಗಿ ಮಗು.
- ಶಿಕ್ಷಕ ಮತ್ತು ಕಲಿಕಾರ್ಥಿಗಳಿಗೆ ಕಲಿಕೆಯನ್ನು ಆನಂದದಾಯಕ ಮತ್ತು ಸೃಜನಾತ್ಮಕ ಅನುಭವವನ್ನಾಗಿ ಮಾಡುವುದು.
- ಶಿಕ್ಷಕರು ಮತ್ತು ಕಲಿಕಾರ್ಥಿಗಳ ಜಂಟಿ ಅನ್ವೇಷಣೆಯಾಗಿ ಬೋಧನೆ–ಕಲಿಕೆ.
- ಎಲ್ಲವನ್ನು ಒಳಗೊಳ್ಳುವ ಸಮಾಜೋ–ಸಾಂಸ್ಕೃತಿಕ ವೈವಿಧ್ಯತೆಯ ಸಂದರ್ಭದಲ್ಲಿ ಕಲಿಕೆ.

**ಘಟಕ 3: ಬೋಧನೆ–ಕಲಿಕೆಗೆ ಪೂರಕವಾಗಿರುವ ಸನ್ನಿವೇಶವನ್ನು ರೂಪಿಸುವುದು**

- ಆಕರ್ಷಣೀಯ ಮತ್ತು ಜೀವಂತಿಕೆಯಿಂದ ಕೂಡಿದ ಶಾಲೆ ಮತ್ತು ತರಗತಿ ಪರಿಸರ.
- ತರಗತಿ ಕೋಣೆಯ ಸ್ಥಳಾವಕಾಶಗಳು ಮತ್ತು ಸಾಮಗ್ರಿಗಳ ಸೃಜನಾತ್ಮಕ ಸಂಯೋಜನೆ.
- ಸಕ್ರಿಯ ಕಲಿಕೆಗೆ ಅವಕಾಶಗಳನ್ನು ಸದೃಢಗೊಳಿಸುವುದು.
- ಒಳಗೊಳ್ಳುವಿಕೆಯ ಪರಿಸರ: ಪರಸ್ಪರ ಗೌರವ, ಸ್ವೀಕಾರ ಮತ್ತು ಸಾಮಾನ್ಯ ಅಸ್ಮಿತೆಯ ಪ್ರಜ್ಞೆ
- ತರಗತಿ ಕೋಣೆಗಳಲ್ಲಿ ಆತ್ಮೀಯ, ಸುರಕ್ಷಿತ ಮತ್ತು ಆರೈಕೆ ನೀಡುವಂತಹ ಪರಿಸರ.

**ಘಟಕ 4: ತರಗತಿ ಪ್ರಕ್ರಿಯೆಗಳ ಪರಿಣಾಮಕತ್ವವನ್ನು ಹೆಚ್ಚಿಸುವುದು.**

- ವೀಕ್ಷಣೆ, ಹಿಮ್ಮಾಹಿತಿ ಮತ್ತು ಮೇಲ್ವಿಚಾರಣೆ.
- ಮಕ್ಕಳೊಂದಿಗೆ ನೇರವಾಗಿ ತೊಡಗಿಸಿಕೊಳ್ಳುವುದು ಮತ್ತು ಪ್ರತಿ ಮಗುವಿನ ಪ್ರಗತಿಯ ಮೇಲೆ ಗಮನವಿಡುವುದು.
- ತರಗತಿ ಕೋಣೆಯ ಚಟುವಟಿಕೆಗಳನ್ನು ಸುಧಾರಿಸಲು ಸಹಭಾಗಿತ್ವದ ಆಚರಣೆಗಳು.
- ತರಬೇತಿ ಮತ್ತು ಉನ್ನತ ಮಾರ್ಗದರ್ಶನ
- ಬೋಧನೆ–ಕಲಿಕಾ ಪ್ರಕ್ರಿಯೆಯಲ್ಲಿ ತಂತ್ರಜ್ಞಾನ.
- ಅನ್ವೇಷಿಸುವ ಮತ್ತು ಪ್ರಯೋಗ ಮಾಡುವ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸುವುದು.

**ಘಟಕ 5: ಶಿಕ್ಷಕರನ್ನು ಒಬ್ಬ ವೃತ್ತಿಪರರಾಗಿ ಅಭಿವೃದ್ಧಿಪಡಿಸುವುದು.**

- ಶಿಕ್ಷಕ: ಶಾಲಾ ಪರಿವರ್ತನೆಯ ಪ್ರಮುಖ ಪಾತ್ರದಾರಿ.
- ಶಿಕ್ಷಕರ ನಾಯಕತ್ವವನ್ನು ಪೋಷಿಸುವುದು.
- ಶಿಕ್ಷಕ ಒಬ್ಬ ಚಿಂತನಾಶೀಲ ವೃತ್ತಿನಿರತನಾಗಿ.
- ಶಿಕ್ಷಕ–ವಿದ್ಯಾರ್ಥಿ ಸಂವಾದವನ್ನು ತರಗತಿಯೊಳಗೆ ಮತ್ತು ಹೊರಗೆ ಸುಗಮಗೊಳಿಸುವುದು.
- ಶಿಕ್ಷಕರ ಸಮಸ್ಯೆಗಳಿಗೆ ಮತ್ತು ಕಾಳಜಿಗಳಿಗೆ ಸ್ಪಂದಿಸುವುದು.
- ಶಿಕ್ಷಕರ ವೃತ್ತಿಪರ ಪ್ರಗತಿಯನ್ನು ಉತ್ತೇಜಿಸುವುದು.

**ಘಟಕ 6: ಬೋಧನೆ–ಕಲಿಕೆ ಪ್ರಕ್ರಿಯೆಯನ್ನು ಸಮೃದ್ಧಗೊಳಿಸುವುದು: ತರಗತಿ ಕೋಣೆಯ ಮಿತಿಯ ಮೀರಿ**

- ಪೋಷಕರ ದೃಷ್ಟಿಯಿಂದ ಮಗುವನ್ನು ಅರ್ಥಮಾಡಿಕೊಳ್ಳುವುದು.
- ಮಗುವಿನ ಕಲಿಕೆಯಲ್ಲಿ ಗೃಹ ಬೆಂಬಲ.
- ಸಮುದಾಯದ ಜ್ಞಾನ ಮತ್ತು ಸೃಜನಶೀಲತೆಯ ಮೂಲಕ ಶಾಲಾ ಅನುಭವವನ್ನು ಸಮೃದ್ಧಗೊಳಿಸುವುದು.
- ಪೋಷಕರು ಮತ್ತು ಶಿಕ್ಷಕರ ನಡುವಿನ ಹಿಮ್ಮಾಹಿತಿ ವರ್ತುಲವನ್ನು ಸದೃಢಗೊಳಿಸುವುದು: ಶಾಲಾ ವಿದ್ಯಾಭ್ಯಾಸದ ಅನುಭವ ಮತ್ತು ಕಲಿಕೆ.
- ಕಲಿಕಾ ಅವಕಾಶವಾಗಿ ನೆರೆಹೊರೆ.

## ಪ್ರಧಾನ ಕ್ಷೇತ್ರ 4: ತಂಡ ನಿರ್ಮಾಣ ಮತ್ತು ಮುನ್ನಡೆಸುವುದು.

ಪರಿಣಾಮಕಾರಿ ತಂಡಗಳನ್ನು ನಿರ್ಮಾಣ ಮಾಡಲು ಮತ್ತು ಸುಸ್ಥಿರಗೊಳಸಲು ಅಗತ್ಯವಿರುವ ಕೌಶಲಗಳನ್ನು ಇದು ಕೈಗೆತ್ತಿಕೊಳ್ಳುತ್ತದೆ. ಇದು ತಂಡದ ಚಾಲಕ ಶಕ್ತಿಗಳು, ಸಹಭಾಗಿತ್ವದ ಪ್ರಕ್ರಿಯೆಗಳು, ತಂಡದ ಚಟುವಟಿಕೆ ಘರ್ಷಣೆ ನಿವಾರಣೆ ಮತ್ತು ತಂಡದ ಸದಸ್ಯರ ವೃತ್ತಿಪರ ಅಭಿವೃದ್ಧಿಗೆ ಅವಕಾಶಗಳ ಮೇಲೆ ಗಮನ ಹರಿಸುತ್ತದೆ.

### ಉದ್ದೇಶ

- ತಂಡಗಳಲ್ಲಿ ಕೆಲಸ ಮಾಡುವುದನ್ನು ಮತ್ತು ಸಹಭಾಗಿತ್ವವನ್ನು ಸುಗಮಗೊಳಸುವುದು.

#### ಘಟಕ 1: ತಂಡ ನಿರ್ಮಾಣ

- ತಂಡದ ಸದಸ್ಯರ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಅರ್ಥ ಮಾಡಿಕೊಳ್ಳುವುದು.
- ಗುಂಪಿನ ಚಾಲಕ ಶಕ್ತಿಯ ಅಧ್ಯಯನ
- ಸಹಭಾಗಿತ್ವ ಮತ್ತು ಸಹಕಾರದ ಪ್ರಕ್ರಿಯೆಗಳನ್ನು ರೂಪಿಸುವುದು.
- ಜವಾಬ್ದಾರಿಗಳು ಮತ್ತು ಸಾಮರ್ಥ್ಯಗಳ ಹೊಂದಾಣಿಕೆ.

#### ಘಟಕ 2: ತಂಡ ಕಾರ್ಯವನ್ನು ಪೋಷಿಸುವುದು.

- ಸಂಘಟಿತವಾಗಿ ಯೋಜಿಸುವುದು.
- ವೃತ್ತಿಪರ ಚರ್ಚೆ ಮತ್ತು ಸಂವಾದವನ್ನು ಪೋಷಿಸುವುದು
- ಸಂಘಟಿತರಾಗಿ ಕಾರ್ಯಪ್ರವೃತ್ತರಾಗುವುದು.
- ರಚನಾತ್ಮಕ ಚಿಂತನೆಯಲ್ಲಿ ಆಳವಾಗಿ ತೊಡಗಿಸಿಕೊಳ್ಳಲು ವೇದಿಕೆಯಾಗಿ ಸಿಬ್ಬಂದಿ ಸಭೆಗಳು.
- ಪುನರಾವಲೋಕನ ಮತ್ತು ಹಿಮ್ಮಾಹಿತಿ ವ್ಯವಸ್ಥೆಯನ್ನು ಸ್ಥಾಪಿಸುವುದು.

#### ಘಟಕ 3: ತಂಡ ನಾಯಕನಾಗಿರುವುದು

- ಪರಿಣಾಮಕಾರಿ ತಂಡ ಕಾರ್ಯಕ್ಕೆ ಅವಕಾಶಗಳನ್ನು ಸೃಷ್ಟಿಸುವುದು.
- ತಂಡಕ್ಕೆ ಪರಿಣಾಮಕಾರಿ ಸಂವಹನ ಪ್ರಕ್ರಿಯೆಗಳನ್ನು ರೂಪಿಸುವುದು.
- ತಂಡ ಕಾರ್ಯದಲ್ಲಿ ನಿರ್ಧಾರ ತೆಗೆದುಕೊಳ್ಳುವಿಕೆ.
- ತಂಡಗಳ ಮೂಲಕ ಕೆಲಸಗಳನ್ನು ಕಾರ್ಯಗತಗೊಳಸುವುದು.
- ಸಂಘರ್ಷ ನಿವಾರಣೆ.

## ಪ್ರಧಾನ ಕ್ಷೇತ್ರ 5: ಆವಿಷ್ಕಾರವನ್ನು ಮುನ್ನಡೆಸುವುದು

ಇದು ಶಾಲೆಯ ಸಂರಚನೆ ಮತ್ತು ಕಾರ್ಯಕ್ರಮಗಳನ್ನು ನಿರಂತರ ಬದಲಾವಣೆ ಮತ್ತು ನಾವಿನ್ಯತೆಯ ಮೂಲಕ ಪರಿವರ್ತನೆ ತರಲು ಅಪೇಕ್ಷಿಸುತ್ತದೆ. ಇಲ್ಲಿ ಸಂಘಟಿತ ಪ್ರಯತ್ನ ಮತ್ತು ನಾವಿನ್ಯತೆಯ ಸಂಸ್ಕೃತಿಯನ್ನು ಹುಟ್ಟುಹಾಕುವ ಮೂಲಕ ಹೊಸ ವಿಚಾರ ಮತ್ತು ಕ್ರಿಯೆಗಳನ್ನು ಬೆಂಬಲಿಸುವ ಪರಿಸರ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಸೃಜಿಸುವುದರ ಮೇಲೆ ಗಮನ ಹರಿಸಲಾಗಿದೆ.

### ಉದ್ದೇಶ

- ನಾವಿನ್ಯಪೂರ್ಣ ಕ್ರಿಯೆಗಳ ಮೂಲಕ ಪರಿವರ್ತನೆಯನ್ನು ಸುಗಮಗೊಳಿಸುವುದು.

**ಘಟಕ 1: ನಾವಿನ್ಯತೆ – ಕಲಿಕಾ ಸಂಸ್ಥೆಯ ಹೃದಯ**

- ಶಾಲಾ ಮುಖ್ಯಸ್ಥರು ನಾವಿನ್ಯತೆಯ ಚಾಲಕ ಶಕ್ತಿಯ ಪ್ರಮುಖ ಪಾತ್ರದಾರಿ.
- ಹೊಸ ವಿಚಾರಗಳ ಹುಡುಕಾಟದಲ್ಲಿ: ಸಂವಾದ ಮತ್ತು ಬುದ್ಧಿ ಮಂಥನ. ನಾವಿನ್ಯತೆ: ಶಾಲಾ ಸುಧಾರಣೆಗೆ ಮಹತ್ವವಾಗಿದೆ.
- ಸಿದ್ಧ ಚೌಕಟ್ಟಿನಾಚೆ ನೋಡುವುದು.

**ಘಟಕ 2: ಶಾಲೆಯಲಿ ನಾವಿನ್ಯತೆಯ ಸಂಸ್ಕೃತಿಯನ್ನು ರೂಪಿಸುವುದು.**

- ನಾವಿನ್ಯತೆಯನ್ನು ಪೋಷಿಸುವುದು: ಪ್ರಾಯೋಗಿಕತೆ ಮತ್ತು ಸಂಶೋಧನೆಗಳಿಗೆ ಅವಕಾಶಗಳನ್ನು ಸೃಷ್ಟಿಸುವುದು.
- ಸಮರ್ಪಕ ಸಂಪನ್ಮೂಲ ಮತ್ತು ಶೈಕ್ಷಣಿಕ ಬೆಂಬಲವನ್ನು ಖಾತರಿಪಡಿಸುವುದು.
- ವೈಯಕ್ತಿಕ ಅನನ್ಯತೆ ಮತ್ತು ವಿಭಿನ್ನ ದೃಷ್ಟಿಕೋನಗಳನ್ನು ಸ್ವೀಕರಿಸುವುದು.
- ಬದಲಾವಣೆಗೆ ಪ್ರತಿರೋಧವನ್ನು ಅರ್ಥಮಾಡಿಕೊಳ್ಳುವುದು ಮತ್ತು ನಿಭಾಯಿಸುವುದು.
- ಹೊಸ ವಿಚಾರಗಳಿಗೆ ಮತ್ತು ಕ್ರಿಯೆಗಳಿಗೆ ಸೂಕ್ತ ಪ್ರತಿಫಲ ಮತ್ತು ಮನ್ನಣೆ.
- ಶಾಲೆಯಲ್ಲಿ ನಾವಿನ್ಯತೆಯನ್ನು ಗುರುತಿಸುವುದು ಮತ್ತು ದಾಖಲಾತೀಕರಣ ಮಾಡುವುದು.

**ಘಟಕ 3: ನಾವಿನ್ಯತೆಯ ಮೂಲಕ ಶಾಲೆಯ ಪುನರ್ ನಿರ್ಮಾಣ**

- ಶಾಲಾ ಮಟ್ಟದಲ್ಲಿ ನಾವಿನ್ಯತೆ: ಪಠ್ಯಕ್ರಮದ ಸಂಯೋಜನೆ, ವಾರ್ಷಿಕ ಕ್ಯಾಲೆಂಡರ್, ಕೆಲಸದ ಹಂಚಿಕೆ, ಅಯ-ವ್ಯಯ, ಮಧ್ಯಾಹ್ನದೂಟ, ಹಣಕಾಸು ನಿರ್ವಣೆ ಮತ್ತು ನಿಧಿ ಸಂಗ್ರಹಣೆ, ಲಭ್ಯವಿರುವ ಸಂಪನ್ಮೂಲಗಳ ಸದ್ಬಳಕೆ, ವಾರ್ಷಿಕ ಸಮಾರಂಭಗಳನ್ನು ನಡೆಸುವುದು, ಸಮುದಾಯು ಸಭೆಗಳನ್ನು ಮತ್ತು ಸಿಬ್ಬಂದಿ ಸಭೆಗಳನ್ನು ಸಂಘಟಿಸುವುದು -ಇವುಗಳಲ್ಲಿ ಬದಲಾವಣೆಯನ್ನು ತರುವುದು.
- ತರಗತಿ ಮಟ್ಟದಲ್ಲಿ ನಾವಿನ್ಯತೆ: ಬೋಧನೆ-ಕಲಿಕೆ ಪ್ರಕ್ರಿಯೆ, ತರಗತಿ ಕೋಣೆ ಸಂಯೋಜನೆ, ವೇಳಾ ಪಟ್ಟಿ ತಯಾರಿ ಮತ್ತು ತರಗತಿ ನಿರ್ವಹಣೆ.
- ನಾವಿನ್ಯತೆಯನ್ನು ಹುಟ್ಟುಹಾಕುವವರಾಗಿ ವಿದ್ಯಾರ್ಥಿ, ಶಿಕ್ಷಕರು ಮತ್ತು ಸಮುದಾಯ.

## ಪ್ರಧಾನ ಕ್ಷೇತ್ರ 6: ಪಾಲುದಾರಿಕೆಗಳನ್ನು ಮುನ್ನಡೆಸುವುದು

ಶಾಲಾ ಪರಿವರ್ತನೆಯ ಮುನ್ನಡೆಸುವಿಕೆಯು ಶಾಲೆಯ ಒಳಗೆ , ಮತ್ತು ಹೊರಗೆ ಕೂಡಾ ಜನರೊಂದಿಗೆ ಪಾಲುದಾರಿಕೆ ಹೊಂದುವುದನ್ನು ಒಳಗೊಂಡಿದೆ. ಈ ಪ್ರಮುಖ ಕ್ಷೇತ್ರವು ಶಾಲೆ ಮತ್ತು ಪೋಷಕರು; ಸಮುದಾಯದ ಸದಸ್ಯರು, ಶಿಕ್ಷಣ ಇಲಾಖೆಯಲ್ಲಿರುವ ಅಧಿಕಾರಿಗಳು ಹಾಗು ನೆರೆಹೊರೆಯ ಇತರ ಶಾಲೆಗಳು –ಇವುಗಳ ನಡುವೆ ಅರ್ಥಪೂರ್ಣ ಸಂಬಂಧವನ್ನು ರೂಪಿಸುವ ಅಗತ್ಯತೆಯ ಮೇಲೆ ತನ್ನ ಪ್ರಮುಖ ಗಮನ ಹರಿಸುತ್ತದೆ. ಶಾಲಾ ನಾಯಕರನ್ನು ಬಹು ಭಾಗೀದಾರರೊಂದಿಗೆ ಪಾಲುದಾರಿಕೆಯನ್ನು ಸ್ಥಾಪಿಸಲು ಕೌಶಲಯುತವಾಗಿ ಅವಕಾಶಗಳನ್ನು ಸೃಷ್ಟಿಸಲು ಸಶಕ್ತಗೊಳಿಸುವುದು ಇದರ ಉದ್ದೇಶವಾಗಿದೆ.

### ಉದ್ದೇಶ

- **ಪೋಷಕರು, ಸಮುದಾಯ ಮತ್ತು ಶೈಕ್ಷಣಿಕ ಕಾರ್ಯ ನಿರ್ವಾಹಕರೊಂದಿಗೆ ಶಾಲಾ ಪರಿವರ್ತನೆಯ ನಿಟ್ಟಿನಲ್ಲಿ ಪಾಲುದಾರಿಕೆಯನ್ನು ಸುಗಮಗೊಳಿಸುವುದು.**

**ಘಟಕ 1: ಗೃಹ–ಶಾಲೆ ಪಾಲುದಾರಿಕೆ**

- ಗೃಹ–ಶಾಲೆ ಸಂವಾದಕ್ಕೆ ಅವಕಾಶಗಳನ್ನು ಸೃಷ್ಟಿಸುವುದು.
- ಕಲಿಕೆ ಮತ್ತು ಅಭಿವೃದ್ಧಿಯು ಶಿಕ್ಷಕರು ಮತ್ತು ಪೋಷಕರ ಜಂಟಿ ಜವಾಬ್ದಾರಿಯಾಗಿರುತ್ತದೆ.
- ಪೋಷಕರು ಮತ್ತು ಶಿಕ್ಷಕರ ವಿಭಿನ್ನ ದೃಷ್ಟಿಕೋನಗಳು ಮತ್ತು ನಿರೀಕ್ಷೆಗಳನ್ನು ನಿಭಾಯಿಸುವುದು.
- ಶಾಲಾ ನಿರ್ವಹಣೆಯಲ್ಲಿ ಪೋಷಕರ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು.
- ಪೋಷಕರ ಕಲಿಕೆಗೆ ವೇದಿಕೆಯಾಗಿ ಶಾಲೆ.

**ಘಟಕ 2: ಸಮುದಾಯದ ಜೊತೆ ಕೆಲಸ ಮಾಡುವುದು**

- ಶಾಲೆ –ಸಮುದಾಯ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು.
- ಸಮುದಾಯದ ಒಳಗೊಳ್ಳುವಿಕೆಗೆ ಶಾಲೆಯಲ್ಲಿ ಅವಕಾಶಗಳನ್ನು ಸೃಷ್ಟಿಸುವುದು.
- ಶಾಲಾ ನಿರ್ವಹಣಾ ಸಮಿತಿಯ ಮೂಲಕ ಸಮುದಾಯ ಭಾಗವಹಿಸುವಿಕೆಯನ್ನು ಸಾಂಸ್ಥೀಕರಣಗೊಳಿಸುವುದು.
- ಶಾಲಾಭಿವೃದ್ಧಿ ಯೋಜನೆಯಲ್ಲಿ ಸಮುದಾಯದ ಪಾತ್ರ.
- ಸಮುದಾಯಕ್ಕೆ ಸಾಮಾಜಿಕ ಕಲಿಕೆಯ ತಾಣವಾಗಿ ಶಾಲೆ.
- ಸ್ಥಳೀಯ ನಾಯಕತ್ವದೊಂದಿಗೆ ಪರಸ್ಪರ ಹೊಂದಾಣಿಕೆ ಮತ್ತು ಗೌರವದಿಂದ ಕೆಲಸ ಮಾಡುವುದು.

**ಘಟಕ 3: ವ್ಯವಸ್ಥೆಯ ಜೊತೆ ಕೆಲಸ ಮಾಡುವುದು**

- ಶಿಕ್ಷಣ ವ್ಯವಸ್ಥೆಯ ಭಾಗವಾಗಿ ಶಾಲೆ
- ಶೈಕ್ಷಣಿಕ ಆಡಳಿತಗಾರರೊಂದಿಗೆ ಪರಿಣಾಮಕಾರಿಯಾಗಿ ಸಂವಾದ ನಡೆಸುವುದು.
- ಶಾಲಾಭಿವೃದ್ಧಿಯ ಬೇಡಿಕೆಗಳು ಮತ್ತು ವ್ಯವಸ್ಥೆಯ ಮಟ್ಟದ ಅಗತ್ಯಗಳ ನಡುವೆ ಸಮತೋಲನ ಸಾಧಿಸುವುದು.
- ಸ್ಥಳೀಯ ಸಂಪನ್ಮೂಲ ಬೆಂಬಲ ಸಂಸ್ಥೆಗಳೊಂದಿಗೆ ಸಂಪರ್ಕ ಕಲ್ಪಿಸುವುದು.
- ಸಮುದಾಯದ ಶಾಲೆಗಳ ನಡುವೆ ಅತ್ಯುತ್ತಮ ಆಚರಣೆಗಳ ಹಂಚಿಕೆ, ಅಳವಡಿಕೆ, ಭಾಗವಹಿಸುವಿಕೆ ಮತ್ತು ವಿನಿಮಯ.

## ಪ್ರಧಾನ ಕ್ಷೇತ್ರ 7: ಶಾಲಾಡಳಿತವನ್ನು ಮುನ್ನಡೆಸುವುದು.

ಈ ಪ್ರಧಾನ ಕ್ಷೇತ್ರವು ಒಂದು ಶಾಲೆಯ ಆಡಳಿತ್ಮಾತಕ ಮತ್ತು ಆರ್ಥಿಕ ಅಂಶಗಳ ಕಡೆಗೆ ಗಮನಹರಿಸುತ್ತದೆ. ಇದು, ಶಾಲಾ ಮುಖ್ಯಸ್ಥರುಗಳು ರಾಜ್ಯ ಸರ್ಕಾರವು ನೀಡಿದ ಆಡಳಿತಾತ್ಮಕ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ಅರ್ಥೈಸಿಕೊಳ್ಳಲು ಸಹಾಯಕವಾಗುತ್ತದೆ. ಈ ಕ್ಷೇತ್ರವು ಶಾಲೆಯ ಹಣಕಾಸು ಆಯವ್ಯಯ ಮತ್ತು ಅನುದಾನದ ಬಳಕೆಯ ತಿಳುವಳಿಕೆ ಮೂಡಿಸುತ್ತದೆ. ಒಂದು ಶಾಲೆಯನ್ನು ಮುನ್ನಡೆಸುವಲ್ಲಿ ಭೌತಿಕ ಮತ್ತು ಮಾನವ ಸಂಪನ್ಮೂಲಗಳ ನಿರ್ವಹಣೆ ಅತಿ ಮುಖ್ಯವಾಗಿರುವುದರಿಂದ ಈ ಪ್ರಧಾನ ಕ್ಷೇತ್ರವು ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ವಿವಿಧ ಆಯಾಮಗಳನ್ನು ಚಿಂತಿಸುತ್ತದೆ. ಶಾಲಾ ಮುಖ್ಯಸ್ಥರು ಪರಿಣಾಮಕಾರಿ ದತ್ತಾಂಶ ವ್ಯವಸ್ಥೆ ನಿರ್ಮಿಸಿಕೊಳ್ಳಲು ಮತ್ತು ಮಾಹಿತಿ ಆಧಾರಿತ ನಿರ್ಧಾರ ಕೈಗೊಳ್ಳುವುದರೊಂದಿಗೆ ಶಾಲಾ ಪರಿವರ್ತನೆಯನ್ನು ಮುನ್ನಡೆಸಲು ಸಹಕಾರಿಯಾಗಿದೆ.

### ಉದ್ದೇಶ :

- ಶಾಲಾ ಮುಖ್ಯಸ್ಥರಲ್ಲಿ ಪರಿಣಾಮಕಾರಿ ಆಡಳಿತ, ಹಣಕಾಸು ನಿಯಂತ್ರಣ, ಸಂಪನ್ಮೂಲಗಳು ಮತ್ತು ಮಾಹಿತಿ ಆಧಾರಿತ ನಿರ್ಧಾರ ಕೈಗೊಳ್ಳುವಲ್ಲಿ ಜ್ಞಾನ ಹಾಗೂ ಕೌಶಲ ಅಭಿವೃದ್ಧಿಪಡಿಸುವುದು.

**ಘಟಕ 1 : ಶಾಲಾ ಆಡಳಿತವನ್ನು ಅರ್ಥೈಸಿಕೊಳ್ಳುವುದು.**

- ಶಾಲಾ ಪರಿವರ್ತನೆಯ ಹಿನ್ನಲೆಯಲ್ಲಿ ಶಾಲಾ ಮುಖ್ಯಸ್ಥರ ಪಾತ್ರವನ್ನು ವಿಕಸಿಸುವುದು. ಶಾಲಾ ಮುಖ್ಯಸ್ಥರು ಶಿಕ್ಷಕರು ಮತ್ತು ಸಿಬ್ಬಂದಿಗಳ ನಡವಳಿಕೆ, ಸೇವೆ, ರಜೆ, ಪಿಂಚಣಿ ನಿಯಮಗಳು, ಮತ್ತು ಶಾಲಾ ಕಾಯ್ದೆಯ ಜ್ಞಾನ; ರಾಜ್ಯದ ನೀತಿಗಳಲ್ಲಿನ ವೈಶಿಷ್ಟ್ಯತೆಗಳು, ಮಾನದಂಡ ಮತ್ತು ಮಾರ್ಗದರ್ಶಿಗಳನ್ನು ಅರ್ಥೈಸಿಕೊಳ್ಳುವುದು, ಯೋಜನೆಗಳು ಮತ್ತು ಶಾಲೆಗಳಲ್ಲಿ ಅವುಗಳ ಸೂಕ್ತ ಅನುಷ್ಠಾನ; ಅಧಿಕಾರಿಗಳೊಂದಿಗೆ ಸಂವಹನ ಮತ್ತು ಸೂಕ್ತ ಕಡತ ನಿರ್ವಹಣೆ ಟಿಪ್ಪಣಿ ತಯಾರಿ ಮತ್ತು ಕರಡು ತಯಾರಿಸುವುದನ್ನು ತಿಳಿಯುವುದು.
- ಶಿಕ್ಷಕರ ವಾರ್ಷಿಕ ವಾರ್ಷಿಕ ಕಾರ್ಯ ನಿರ್ವಹಣಾ ವರದಿ (ಎಸಿಆರ್); ಶಾಲಾ ಮಟ್ಟದ ಯೋಜನೆಯ ಅನುಷ್ಠಾನಕ್ಕಾಗಿ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಸಹಯೋಗದೊಂದಿಗೆ ಒಂದು ಉತ್ತರದಾಯಿ ವ್ಯವಸ್ಥೆಯನ್ನು ರಚಿಸಿಕೊಳ್ಳುವುದು.

**ಘಟಕ 2 : ಶಾಲಾ ಹಣಕಾಸು**

- ಸಂಪನ್ಮೂಲ ಮತ್ತು ಆರ್ಥಿಕ ನಿರ್ವಹಣೆಯ ಮಹತ್ವ.
- ಆಯವ್ಯಯ ಮತ್ತು ಲೆಕ್ಕಪತ್ರ ಸಾಧನಗಳ ಜ್ಞಾನ.
- ಹಣಕಾಸಿನ ವಿಚಾರ ಮತ್ತು ನಿಯಮಗಳಿಗೆ ಸಂಬಂಧಿಸಿದಂತೆ ಅನುದಾನ ಬಳಕೆಯಲ್ಲಿ ಸ್ವಾಯತ್ತತೆ.
- ನೌಕರರ ಉಪಲಬ್ಧಿಗಳಾದ ವೇತನ ಮತ್ತು ಬಾಕಿ ನಿಗದಿ, ಪಿಂಚಣಿ ಲೆಕ್ಕಪತ್ರ ಇತ್ಯಾದಿಗಳಿಗೆ ಸಂಬಂಧಿಸಿದ ಆರ್ಥಿಕ ನಿರ್ವಹಣೆಯ ತಿಳುವಳಿಕೆ.

- ಶಾಲಾ ಮಟ್ಟದ ಬಿಲ್ಲುಗಳು (ವೇತನ, ಬಾಕಿ, ವೈದ್ಯಕೀಯ, ಸಾದಿಲ್ವಾರು ರಶೀದಿ ಇತ್ಯಾದಿ), ನಗದು ಪುಸ್ತಕ, ಲೆಕ್ಕ ಪರಿಶೋಧನೆ ಮತ್ತು ತೆರಿಗೆ ಸಂಬಂಧಿ ನಿರ್ವಹಣೆಗೆ ಸಂಬಂಧಿಸಿದ ಹಣಕಾಸಿನ ವಿಚಾರಗಳ ತಿಳುವಳಿಕೆ

**ಘಟಕ 3 : ಭೌತಿಕ ಮತ್ತು ಮಾನವ ಸಂಪನ್ಮೂಲಗಳ ಪರಿಣಾಮಕಾರಿ ನಿರ್ವಹಣೆ**

- ವಿದ್ಯಾರ್ಥಿಗಳಿಗೆ ಶಾಲಾ ಪರಿಸರವನ್ನು ಸಂತಸದಾಯಕ ಕಲಿಕಾ ತಾಣವಾಗಿ ರೂಪಿಸುವುದು.
- ಶಾಲೆಗಾಗಿ ಮೂಲಸೌಕರ್ಯ ಹಾಗೂ ಕ್ರಿಯಾತ್ಮಕ ತರಗತಿ ಕೋಣೆಯ ಖಾತ್ರಿಗಾಗಿ ಇಲಾಖೆ ಮತ್ತು ಸಮೂದಾಯದೊಂದಿಗೆ ಸಂಪರ್ಕ
- ಮುಕ್ತ ಸ್ಥಳಾವಕಾಶ ಮತ್ತು ಆಟದ ಮೈದಾನದ ಅಭಿವೃದ್ದಿ
- ಮಕ್ಕಳ ಸುರಕ್ಷತೆಗಾಗಿ ಸಹಭಾಗಿ ಮಾದರಿಯ ಅಭಿವೃದ್ಧಿ ಮತ್ತು ಅದಕ್ಕಾಗಿ ಸಂಪನ್ಮೂಲಗಳ ಸಂರಕ್ಷಣೆ
- ಶಾಲಾ ಪ್ರಕ್ರಿಯೆಗಳಿಗಾಗಿ ಇರುವ ಮಾನವ ಸಂಪನ್ಮೂಲದ ಗರಿಷ್ಠ ಬಳಕೆಗೆ ನವೀನ ವಿಧಾನಗಳು
- ಮಾನವ ಸಂಪನ್ಮೂಲ ಹೊಂದಲು ಸಹವರ್ತಿ ಶಾಲೆ, ಸಮುದಾಯ, ಮತ್ತು ಇಲಾಖೆಯೊಂದಿಗೆ ಸಂಪರ್ಕ ಏರ್ಪಡಿಸುವುದು.
- ಶಿಕ್ಷಕ ಮತ್ತು ಸಿಬ್ಬಂದಿ ನಿರ್ವಹಣೆ ಹಾಗೂ ಆರ್ಥಿಕತೆ ಸಂಬಂಧಿಸಿದ ಕಾಳಜಿಗಳು

**ಘಟಕ 4 : ಮಾಹಿತಿಯುಕ್ತ ನಿರ್ಧಾರ ಕೈಗೊಳ್ಳಲು ದತ್ತಾಂಶ ಸಂಚಿ ಮಾಹಿತಿ ನಿರ್ವಹಣಾ ವ್ಯವಸ್ಥೆ**

- ಶಾಲಾ ಪರಿವರ್ತನೆಗೆ ಸಂಬಂಧಿಸಿದಂತೆ ಮಾಹಿತಿಯುಕ್ತ ನಿರ್ಧಾರ ಕೈಗೊಳ್ಳಲು ವಿಶ್ವಾಸನೀಯ ದತ್ತಾಂಶ ಸಂಚಯವನ್ನು ಸೃಷ್ಟಿಸುವ ಮತ್ತು ಸುಸ್ಥಿರಗೊಳಸುವುದರ ಮಹತ್ವ.
- ವಿದ್ಯಾರ್ಥಿಗಳ ಪ್ರಗತಿ ಮತ್ತು ಅವರ ಗುಣಲಕ್ಷಣಗಳನ್ನು ಕಂಡುಕೊಳ್ಳಲು ಮಾಹಿತಿ ಸಂವಹನ ತಂತ್ರಜ್ಞಾನ ಆಧಾರಿತ ದತ್ತಾಂಶ ಸಂಚಿ ವ್ಯವಸ್ಥೆಯನ್ನು ಸ್ಥಾಪಿಸುವುದು.
- ವಿದ್ಯಾರ್ಥಿಗಳು ಶ್ರೇಣಿಯಲ್ಲಿ ಯಶಸ್ವಿಯಾಗಿ ಮುನ್ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯಾಧಾರಿತ ಕಲಿಕೆಯ ಬೆಂಬಲ ವ್ಯವಸ್ಥೆ.
- ಶಿಕ್ಷಕರು ಮತ್ತು ಸಿಬ್ಬಂದಿಗೆ ವ್ಯವಸ್ಥಿತ ಮತ್ತು ಸುಲಭವಾಗಿ ಲಭ್ಯವಾಗುವ ಸಿಬ್ಬಂದಿ ದಾಖಲೆ ಮತ್ತು ಸೇವಾ ನಿಯಮಗಳಿಗೆ ಬದ್ಧತೆ ಖಾತರಿ.
- ಹಣಕಾಸಿನ ದತ್ತಾಂಶ ಸಂಚಿ ಮತ್ತು ದಾಖಲೆ ನಿರ್ವಹಣೆ.
- ಹಾಜರಾತಿ, ದಾಖಲಾತಿ, ಪೋಷಕರ ಸಭೆ, ಶಿಕ್ಷಕರ ಸಭೆ, ಪಠ್ಯಕ್ರಮ ಯೋಜನೆ, ವಾರ್ಷಿಕ ಚಟುವಟಿಕೆ, ಮುಂತಾದ ಶಿಕ್ಷಕ, ಪೋಷಕ, ವಿದ್ಯಾರ್ಥಿ ಸಂಬಂಧಿ ವಿಧಿವಿಧಾನಗಳಿಗೆ ವ್ಯವಸ್ಥೆ ರೂಪಿಸುವುದು ಮತ್ತು ಕುಂದುಕೊರತೆ ಹಾಗೂ ಸಲಹೆಗಳ ಕುರಿತ ಕ್ರಮಗಳ ಪರಿಶೀಲನೆಗಾಗಿ ಅಗತ್ಯ ಪ್ರಕ್ರಿಯೆ ರೂಪಿಸುವುದು.

# ವಿಶೇಷ ಗಮನ ಕೇಂದ್ರಿತ ಕ್ಷೇತ್ರಗಳು

ಭಾರತದ ಪ್ರಸ್ತುತ ಶಾಲಾ ಶಿಕ್ಷಣದ ಸನ್ನಿವೇಶದ ಹಿನ್ನಲೆಯಲ್ಲಿ, ಈ ಚೌಕಟ್ಟು, ಕೆಲವು ನಿರ್ದಿಷ್ಟ ರಾಜ್ಯಗಳು ಮತ್ತು ಸಂದರ್ಭಗಳಿಗೆ ಅನನ್ಯವೆನಿಸುವ ಶಾಲಾ ಶಿಕ್ಷಣದ ಸಮಸ್ಯೆಗಳಿಗೆ ಸಂಬಂಧಿಸಿದ ವಿಶೇಷ ಗಮನ ಕೇಂದ್ರಿತ ಕ್ಷೇತ್ರಗಳನ್ನು ಶೋಧಿಸಲು ಮತ್ತು ಅರ್ಥೈಸಿಕೊಳ್ಳಲು ಅವಕಾಶವನ್ನು ಒದಗಿಸುತ್ತದೆ. ವಿಶೇಷ ಗಮನ ಕೇಂದ್ರಿತ ಕ್ಷೇತ್ರಗಳಡಿಯಲ್ಲಿ ನೀಡಲಾದ ಪಠ್ಯಕ್ರಮ ಚೌಕಟ್ಟು ಸಾಮಾಜಿಕ, ಆರ್ಥಿಕ, ಭೌಗೋಳಿಕ ಮತ್ತು/ಅಥವಾ ಅಂತಹ ರಾಜ್ಯಗಳಲ್ಲಿನ ಪ್ರಸ್ತುತ ಶೈಕ್ಷಣಿಕ ಸವಾಲುಗಳನ್ನು ಗಣನೆಗೆ ತೆಗೆದುಕೊಂಡು ಅಭಿವೃದ್ಧಿಪಡಿಸಲಾಗಿದೆ. ಹಾಗೆಯೇ ಸಣ್ಣ ಮತ್ತು ಬಹು ಶ್ರೇಣಿ ಶಾಲೆಗಳು ಎದುರಿಸುತ್ತಿರುವ ಸವಾಲುಗಳು ಕೂಡಾ ವಿಶೇಷ ಗಮಕ್ಕೆ ಅರ್ಹವಾಗಿವೆ.

## ವಿಶೇಷ ಗಮನ ಕೇಂದ್ರಿತ ಕ್ಷೇತ್ರ–1 ಬುಡಕಟ್ಟು ಪ್ರದೇಶಗಳಲ್ಲಿ ಶಾಲೆಗಳನ್ನು ಮುನ್ನಡೆಸುವುದು.

ಇತರ ಪ್ರದೇಶಗಳಿಗಿಂತ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಭಿನ್ನವಾಗಿರುವ ಬುಡಕಟ್ಟು ಪ್ರದೇಶಗಳಲ್ಲಿರುವ ಶಾಲೆಗಳ ಮೇಲೆ ಇಲ್ಲಿ ಗಮನ ಹರಿಸಲಾಗಿದೆ. ಬುಡಕಟ್ಟು ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಕ್ಕಳಿಗೆ ಪ್ರಸ್ತುತವೆನಿಸುವ ಮತ್ತು ಅರ್ಥಪೂರ್ಣ ಶಾಲಾ ಅನುಭವವನ್ನು ಸೃಷ್ಟಿಸಲು, ಶಾಲಾ ನಾಯಕರು ಅಲ್ಲಿಯ ಪ್ರಸ್ತುತ ಸ್ಥಿತಿ–ಗತಿ, ಮಕ್ಕಳ ಅಗತ್ಯಗಳು ಮತ್ತು ನಿರೀಕ್ಷೆಗಳು ಮತ್ತು ಬುಡಕಟ್ಟು ಪ್ರದೇಶಗಳ ಸಮುದಾಯಗಳ ಪರಿಪೂರ್ಣ ಪರಿಚಯವನ್ನು ಬೆಳೆಸಿಕೊಳ್ಳಬೇಕು. ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕೈಗೆತ್ತಿಕೊಳ್ಳಬೇಕಾದ ಕೆಲವೊಂದು ವಿಷಯಗಳು ಈ ಕೆಳಗಿನಂತಿವೆ:

- ಶಾಲೆಯು ಕಾರ್ಯಾಚರಿಸುತ್ತಿರುವ ಸಮಾಜೋ–ಸಾಂಸ್ಕೃತಿಕ ಸಂದರ್ಭವನ್ನು ತಿಳಿದುಕೊಳ್ಳುವುದು.
- ಶಿಕ್ಷಕರು ಮತ್ತು ಆಡಳಿತಗಾರರು ಶಾಲೆಯೊಳಗೆ ತರುವು ರೂಢಿಗತ ಮಾದರಿಗಳನ್ನು ತಿಳಿದುಕೊಳ್ಳುವುದು ಮತ್ತು ಸ್ವೀಕರಿಸುವುದು.
- ಭಾಷಾ ವೈವಿಧ್ಯತೆಗೆ ವಿಶೇಷ ಗಮನ ನೀಡಿ ಬುಡಕಟ್ಟು ಮಕ್ಕಳ ಅಗತ್ಯಗಳನ್ನು ತಿಳಿದುಕೊಳ್ಳುವುದು.
- ವಿದ್ಯಾರ್ಥಿ ಗೈರುಹಾಜರಾತಿ, ವಲಸೆ ಮತ್ತು ಶಿಕ್ಷಕರ ಗೈರುಹಾಜರಾತಿಗೆ ಕಾರಣವಾಗುವ ಶಾಲೆ, ಸಮುದಾಯ ಮತ್ತು ಕುಟುಂಬ– ಸಂಬಂಧಿ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು.
- ಪಠ್ಯಕ್ರಮ, ಪಠ್ಯಪುಸ್ತಕ ಮತ್ತು ಬೋಧನಾ ಶಾಸ್ತ್ರವನ್ನು ಬುಡಕಟ್ಟು ಮಕ್ಕಳ ಅಗತ್ಯಗಳಿಗೆ ಸ್ಪಂದಿಸುವಂತೆ ಮಾಡಲು ಸಂದರ್ಭೀಕರಣಗೊಳಿಸುವುದು.
- ಬುಡಕಟ್ಟು ಪ್ರದೇಶಗಳಲ್ಲಿ ಶಾಲೆ–ಸಮುದಾಯ ಸಂಬಂಧ.
- ಬುಡಕಟ್ಟು ಪ್ರದೇಶಗಳಲ್ಲಿರುವ ವಸತಿ ಶಾಲೆಗಳ ನಿರ್ವಹಣೆ ಮತ್ತು ಆಡಳಿತ.

## ವಿಶೇಷ ಗಮನಕೇಂದ್ರಿತ ಕ್ಷೇತ್ರ – 2: ಬೋಧನೆ ಮತ್ತು ಕಲಿಕೆಯನ್ನು ಸಣ್ಣ ಮತ್ತು ಬಹು ಶ್ರೇಣಿ ಶಾಲೆಗಳಲ್ಲಿ ಮುನ್ನಡೆಸುವುದು.

ಈ ವಿಶೇಷ ಕ್ಷೇತ್ರದಲ್ಲಿ ಏಕೋಪಧ್ಯಾಯ ಶಾಲೆ, ಇಬ್ಬರು–ಶಿಕ್ಷಕರ ಶಾಲೆ ಮತ್ತು ಸಣ್ಣ ಶಾಲೆಗಳಲ್ಲಿ ಬಹು–ಶ್ರೇಣಿ ಬೋಧನೆಯನ್ನು ಮತ್ತು ಬಹು–ಪಾತ್ರಗಳನ್ನು ನಿರ್ವಹಿಸುವ ಶಾಲಾ ಮುಖ್ಯಸ್ಥರ ಮೇಲೆ ಗಮನ ಹರಿಸಲಾಗಿದೆ. ತಮ್ಮ ಪಾತ್ರ, ಸಂದರ್ಭ ಮತ್ತು ಸಮಯದ ವಿನಿಯೋಗದ ಕುರಿತು ಶಿಕ್ಷಕರ ಸೀಮಿತ ಅರಿವು ಇಂತಹ ಶಾಲೆಗಳ ಪ್ರಮುಖ ಗುಣಲಕ್ಷಣವಾಗಿದೆ. ಆದುದರಿಂದ, ಈ ಕ್ಷೇತ್ರವು ಬಹು–ಶ್ರೇಣಿ ಸಂದರ್ಭಗಳಲ್ಲಿ ಬೋಧನೆ ಕಲಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಶಿಕ್ಷಕರನ್ನು ಸಬಲೀಕರಣಗೊಳಿಸುವುದು ಮತ್ತು ಅವರಿಗೆ ಮಾರ್ಗದರ್ಶನ ನೀಡುವುದರ ಮೇಲೆ ಗಮನ ಹರಿಸಿದೆ.

- ಸ್ಥಳೀಯ ಮತ್ತು ಶೈಕ್ಷಣಿಕ ವ್ಯವಸ್ಥೆಯ ಸಂದರ್ಭದಲ್ಲಿರುವ ಅನನ್ಯ ಸವಾಲುಗಳನ್ನು ಅರ್ಥಮಾಡಿಕೊಳ್ಳುವುದು.
- ಸಮಾಜೋ–ಆರ್ಥಿಕ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳಿಗೆ ಸ್ಪಂದಿಸುವ ಸಮನ್ವಯಿಕ ಪರಿಸರವನ್ನು ರೂಪಿಸುವುದು.
- ಪಠ್ಯಕ್ರಮವನ್ನು ಅಳವಡಿಸುವುದು, ವಿವಿಧ ಶ್ರೇಣಿ ಮತ್ತು ವಿವಿಧ ಹಂತಕ್ಕೆ ಸೂಕ್ತವಾದ ಸುಧಾರಿತ ಬೋಧನಾ ಕಲಿಕಾ ಸಾಮಗ್ರಿಗಳನ್ನು ರೂಪಿಸುವುದು, ಕಲಿಕಾರ್ಥಿ ಮಾಪನಕ್ಕೆ ವಿಧಾನಗಳು.
- ವಿದ್ಯಾರ್ಥಿ ನಿರ್ವಹಣೆ: ವಿದ್ಯಾರ್ಥಿಗಳ ನಡುವೆ ಸಂವಾದ, ಪೀರೋಪಕರಣ ವ್ಯವಸ್ಥೆ, ವಿದ್ಯಾರ್ಥಿ ಆರೈಕೆ ಮತ್ತು ಬೆಂಬಲ.
- ಗುಂಪಿನಲ್ಲಿ ಕಲಿಕೆ: ಶ್ರೇಣಿ ಮಟ್ಟಗಳಾದ್ಯಂತ, ಸಹವರ್ತಿ ಬೋಧನೆ ಮತ್ತು ಭಿನ್ನ ವಯೋಮಾನದ ಬೋಧನೆ.
- ಬಹು–ಶ್ರೇಣಿ ವ್ಯವಸ್ಥೆಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಂದ ಸಮಯದ ಪರಿಣಾಮಕಾರಿ ಸದ್ಬಳಕೆ.

## ವಿಶೇಷ ಗಮನ ಕೇಂದ್ರಿತ ಕ್ಷೇತ್ರ 3: ಸಂಘರ್ಷ ಪ್ರದೇಶಗಳಲ್ಲಿ ಶಾಲೆಗಳನ್ನು ನಡೆಸುವುದು.

ಭಾರತದ ವಿವಿಧ ಭಾಗಗಳಲ್ಲಿ ಜನರ ದೈನಂದಿನ ಬದುಕು, ಸಂಘರ್ಷ ಮತ್ತು ಅನಾಹುತಗಳಿಂದ ಕ್ಷೋಭೆಗೊಳಗಾಗಿದೆ. ಅಂತಹ ವಲಯಗಳಲ್ಲಿರುವ ಶಾಲೆಗಳು ಹಲವು ತೆರನಾದ ಸವಾಲುಗಳನ್ನು ಎದುರಿಸುತ್ತಿವೆ: ಶಾಲೆ ಕಾರ್ಯಾಚರಣೆಯಲ್ಲಿ ಅನಿಶ್ಚತತೆ; ಭಾವನಾತ್ಮಕ ಆಘಾತ ಮತ್ತು ಸಿಬ್ಬಂದಿ ಮತ್ತು ಮಕ್ಕಳಲ್ಲಿರುವ ಭಯ. ಅಂತಹ ಸಂದರ್ಭಗಳಲ್ಲಿ, ಶಾಲಾ ಮುಖ್ಯಸ್ಥರು ಶಾಲೆಯ ದೈನಂದಿನ ವ್ಯವಹಾರಗಳ ನಿರ್ವಹಿಸುವ, ಮಕ್ಕಳನ್ನು ಹಾಜರಾಗಲು ಸಶಕ್ತಗೊಳಿಸುವ, ಸಮುದಾಯ ಸಂಬಂಧವನ್ನು ಸ್ಥಾಪಿಸುವ ಮತ್ತು ಶಾಲಾ ವಿದ್ಯಾಭ್ಯಾಸ ಪ್ರಕ್ರಿಯೆಯಲ್ಲಿ ಅವರ ಭಾಗವಹಿಸುವಿಕೆಯನ್ನು ಖಾತರಿಪಡಿಸುವ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಈ ವಿಶೇಷ ಕ್ಷೇತ್ರವು ಅಂತಹ ಸವಾಲುಗಳನ್ನು ಕೈಗೆತ್ತಿಕೊಳ್ಳುತ್ತದೆ.

- ಮಕ್ಕಳನ್ನು ಆಘಾತ ಮತ್ತು ಭಯವನ್ನು ಎದುರಿಸಲು ಸಶಕ್ತ ಬೆಂಬಲ ವ್ಯವಸ್ಥೆಯನ್ನು ರೂಪಿಸುವುದು.
- ತರಗತಿ ಕೋಣೆಯಲ್ಲಿ ಒತ್ತಡ ಮುಕ್ತ ಮತ್ತು ಶಿಶು ಕೇಂದ್ರಿತ ಪರಿಸರವನ್ನು ಸೃಷ್ಟಿಸುವುದು.

- ಯಾವುದೇ ಅಹಿತಕರ ಘಟನೆಯಿಂದ ರಕ್ಷಿಸಿಕೊಳ್ಳಲು ಶಾಲೆಯ ಸುತ್ತ ಪೋಷಕರ ಬೆಂಬಲದೊಂದಿಗೆ ಒಂದು ರಕ್ಷಣಾ ಕವಚವನ್ನು ಅಭಿವೃದ್ಧಿಪಡಿಸುವುದು.
- ಮಕ್ಕಳ ಮತ್ತು ಶಾಲೆಯ ಸುರಕ್ಷಣೆ ಸುರಕ್ಷತೆ ಮತ್ತು ಹಿತಾಸಕ್ತಿಯನ್ನು ಕಾಪಾಡುವ ನಿಟ್ಟಿನಲ್ಲಿ ಸಮುದಾಯ ಮತ್ತು ಪೋಲಿಸರ ಬೆಂಬಲವನ್ನು ಪಡೆಯುವುದು.
- ವಿದ್ಯಾರ್ಥಿ, ಶಿಕ್ಷಕ ಮತ್ತು ಸಿಬ್ಬಂದಿಗಳು ಒಂದು ಧನಾತ್ಮಕ ದೃಷ್ಟಿಕೋನವನ್ನು ಮೈಗೂಡಿಸಿಕೊಂಡು ಪರಸ್ಪರರಿಗೆ ಪರಿಸ್ಥಿತಿ ಎದುರಿಸಲು ಧೈರ್ಯ ತುಂಬಲು ಅವರಿಗೆ ಪ್ರೋತ್ಸಾಹ, ಬೆಂಬಲ ಮತ್ತು ತಯಾರಿ ಒದಗಿಸುವುದು.
- ಪ್ರಸ್ತುತ ಬದುಕಿನ ವಾಸ್ತವಗಳಿಂದ ಕಲಿಯುವುದು, ಅದರ ಕುರಿತು ಶಾಲೆಯಲ್ಲಿ ಚರ್ಚಿಸುವುದು ಮತ್ತು ಬೋಧನ-ಕಲಿಕಾ ಪ್ರಕ್ರಿಯೆಯೊಳಗೆ ಅದನ್ನು ಹೆಣೆಯುವುದು.

## ವಿಶೇಷ ಗಮನಕೇಂದ್ರಿತ ಕ್ಷೇತ್ರ – 4: ಕಠಿಣ ಭೌಗೋಳಿಕ ಸ್ಥಿತಿಗಳು

ಕಠಿಣ ಭೌಗೋಳಿಕ ಪ್ರದೇಶಗಳಾದ ಭಾರಿ ಮಳೆ ಬೀಳುವ ವಲಯಗಳು, ಮರುಭೂಮಿಗಳು, ಗುಡ್ಡಗಾಡು ಮತ್ತು ಕರಾವಳಿ ಪ್ರದೇಶಗಳಲ್ಲಿರುವ ಶಾಲೆಗಳಿಗೆ ವರ್ಷದ ನಿರ್ದಿಷ್ಟ ಋತುಗಳಲ್ಲಿ ವಿಶೇಷ ಗಮನ ನೀಡುವ ಅಗತ್ಯವಿದೆ. ಇದು ಭೌತಿಕ ಮೂಲಭೂತ ಸೌಕರ್ಯಗಳ ಲಭ್ಯತೆ ಹಾಗೂ ಶಾಲೆಯ ಸಹಜ ಬದುಕನ್ನು ಬಾಧಿಸುವ ಹವಾಮಾನ ಏರುಪೇರುಗಳ ನಿರ್ವಹಣೆಯನ್ನು ಒಳಗೊಂಡಿದೆ. ಅಂತಹ ಸವಾಲೊಡ್ಡುವ ಸನ್ನಿವೇಶಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಶಾಲಾ ಮುಖ್ಯಸ್ಥರನ್ನು ಸಜ್ಜುಗೊಳಿಸುವುದು ಇಲ್ಲಿಯ ಉದ್ದೇಶವಾಗಿದೆ.

- ಭೌಗೋಳಿಕ ಮತ್ತು ಹವಾಮಾನ ಏರುಪೇರುಗಳಿಗನುಸಾರವಾಗಿ ಋತುಮಾನ ನಿರ್ದಿಷ್ಟ ವೇಳಾಪಟ್ಟಿಯನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು.
- ಸಮುದಾಯ ನಾಯಕರು ಮತ್ತು ಪೋಷಕರೊಂದಿಗೆ ಸಂವಾದ ಮತ್ತು ಚರ್ಚೆ ನಡೆಸುವ ಮೂಲಕ ಶಾಲಾ ಶಿಕ್ಷಣದ ಮುಂದುವರಿಕೆ; ಶಾಲೆಯಿಂದ ಹೊರಗುಳಿಯುವಿಕೆ ಮತ್ತು ಮಕ್ಕಳ ಗೈರುಹಾಜರಾತಿಯನ್ನು ತಡೆಹಿಡಿಯುವುದನ್ನು ಖಾತರಿಪಡಿಸುವುದು.
- ಶಾಲೆಗಳ ನಿರ್ದಿಷ್ಟ ಪ್ರದೇಶಗಳ ಅಗತ್ಯಗಳನ್ನು ಪೂರೈಸಲು ಮತ್ತು ಹವಾಮಾನಜನ್ಯ ಸವಾಲುಗಳನ್ನು ನಿಭಾಯಿಸಲು ಶೈಕ್ಷಣಿಕ ಮತ್ತು ಮಧ್ಯಾಹ್ನದೂಟದ ಸಾಮಗ್ರಿಗಳನ್ನು ಶೇಖರಿಸಿಡಲು ಸೂಕ್ತ ಮೂಲಭೂತ ಸೌಕರ್ಯ ಮತ್ತು ಶೇಖರಣಾ ವ್ಯವಸ್ಥೆಗಳನ್ನು ನಿರ್ಮಿಸುವುದು.
- ಶಿಕ್ಷಕರನ್ನು ಮತ್ತು ಮಕ್ಕಳನ್ನು ಹವಾಮಾನ ವೈಪರೀತ್ಯಗಳನ್ನು ಎದುರಿಸಲು ಸಜ್ಜುಗೊಳಿಸುವುದು.
- ಸವಾಲುಗಳನ್ನು ಎದುರಿಸಲು ಶಾಲೆಯನ್ನು ಸಜ್ಜುಗೊಳಿಸಲು ಸಮುದಾಯದೊಂದಿಗೆ ಪಾಲುದಾರಿಕೆ ಸ್ಥಾಪಿಸುವುದು.

ಅಂತಹ ವಿಶೇಷ ಸನ್ನಿವೇಶಗಳಲ್ಲಿನ ನಿರ್ದಿಷ್ಟ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುತ್ತಿದಂತೆ, ಸಮಸ್ಯೆ ಬಗೆಹರಿಸುವಿಕೆ ಮತ್ತು ನಿರ್ಧಾರ ತೆಗೆದುಕೊಳ್ಳುವಿಕೆ ಪ್ರಕ್ರಿಯೆಗಳಿಗೆ ಪಠ್ಯಕ್ರಮವು ಶಾಲಾ ಮುಖ್ಯಸ್ಥರಿಗೆ ಬೆಂಬಲ ನೀಡುವ ಪ್ರಯತ್ನವನ್ನು ಮಾಡುತ್ತದೆ.

# ಸಾಮಗ್ರಿ ಅಭಿವೃದ್ಧಿ ಹೊಂದಾಣಿಕೆ ಮತ್ತು ಸಾಂದರ್ಭೀಕರಣ

ಪ್ರತಿಯೊಂದು ಪ್ರಮುಖ ಕ್ಷೇತ್ರದ ಮೇಲೆ ವಿವಿಧ ಅಂತರ್-ಕ್ರಿಯಾತ್ಮಕ ಮತ್ತು ಸುಲಭವಾಗಿ ಓದಬಹುದಾದ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲಾಗುವುದು; ಹಾಗೂ ಅದರ ಪ್ರಮುಖ ಘಟಕಗಳು ಶಾಲಾ ಶಿಕ್ಷಣದ ಗಂಭೀರ ಮತ್ತು ನಿರ್ಣಾಯಕ ವಿಷಯಗಳ ಸುತ್ತ ತರಬೇತಿ ಕಲಿಕಾ ಅವಕಾಶಗಳನ್ನು ಒದಗಿಸುತ್ತದೆ. ವಿವಿಧ ಮೂಲಗಳಿಂದ ಪಡೆದು ಕ್ರೋಢೀಕರಿಸಲಾದ ತರಬೇತಿ ಸಂಚಿಯು ಲಭ್ಯಗೊಳಿಸಲಾಗುತ್ತದೆ. ಈ ತರಬೇತಿ ಸಾಹಿತ್ಯ ಭಂಡಾರವು ಸಂಪನ್ಮೂಲ ಗುಂಪು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ವಿವಿಧ ಸಂದರ್ಭಗಳಲ್ಲಿ ಶಾಲಾ ಮುಖ್ಯಸ್ಥರೊಂದಿಗಿನ ತೊಡಗಿಸಿಕೊಳ್ಳುವಿಕೆಯನ್ನು ಅವಲಂಬಿಸಿ ಮತ್ತು ಅವಶ್ಯಕತೆಗಳಿಗುಣವಾಗಿ ವಿವಿಧ ಸಂಯೋಜನೆಗಳ ರೂಪದಲ್ಲಿ ಬಳಸಿಕೊಳ್ಳಲು ಸಾಕಷ್ಟು ಆಯ್ಕೆಗಳನ್ನು ಒದಗಿಸುತ್ತದೆ:

**ಗುರಿ ನಿರ್ದಿಷ್ಟ ತರಬೇತಿ ಕೈಪಿಡಿಗಳು**: ಪ್ರಾಥಮಿಕ, ಪ್ರೌಢ ಮತ್ತು ಪದವಿ-ಪೂರ್ವ ಶಾಲೆಗಳ ಮುಖ್ಯಸ್ಥರ ವಿಭಿನ್ನ ಅಗತ್ಯಗಳನ್ನು ಪೂರೈಸಲು. ಮತ್ತು ಭವಿಷ್ಯದ ಅಥವಾ ಆಕಾಂಕ್ಷಿ ಶಾಲಾ ಮುಖ್ಯಸ್ಥರ ವಿಭಿನ್ನ ನಾಯಕತ್ವ ಅಗತ್ಯತೆಗಳನ್ನು ಪೂರೈಸಲು.

**ಗುರಿ ನಿರ್ದಿಷ್ಟ ತರಬೇತಿ ಕೈಪಿಡಿಗಳು**: ದೇಶದೆಲ್ಲೆಡೆ ಇರುವ ವೈವಿಧ್ಯಮಯ ಶಾಲೆಗಳ ಪ್ರಾಸಂಗಿಕ ಅಥವಾ ಸಾಂದರ್ಭಿಕ ಸವಾಲುಗಳು ಮತ್ತು ಸನ್ನಿವೇಶಗಳನ್ನು ನಿರ್ವಹಿಸಲು.

ನೈಜ ಪ್ರಕರಣ ಅಧ್ಯಯನಗಳನ್ನು ರಾಜ್ಯಗಳಿಂದ ಸಂಗ್ರಹಿಸಿದ ಸಂಪನ್ಮೂಲ ಸಾಮಗ್ರಿಗಳೊಳಗೆ ಸೇರಿಸಲಾಗುವುದು. ಅದನ್ನು ರಾಜ್ಯ ಸಂಪನ್ಮೂಲ ಗುಂಪಿನೊಂದಿಗೆ ನಡೆಸುವ ಕಾರ್ಯಾಗಾರಗಳ ಮೂಲಕ ಪಡೆಯಲಾಗುವುದು ಮತ್ತು ಪಠ್ಯಕ್ರಮ ಚೌಕಟ್ಟು ಮತ್ತು ಸಂಪನ್ಮೂಲ ಸಾಮಗ್ರಿಗಳನ್ನು ರಾಜ್ಯ ಸರಕಾರ ಮಾಲಿಕತ್ವದ ಶಾಲೆಗಳ ವಾಸ್ತವಕ್ಕೆ ಹತ್ತಿರ ತರಲಾಗುವುದು.

**National Centre for School Leadership**
**National Institute of Educational Planning and Administration**
17-B, Sri Aurobindo Marg, New Delhi-110016 (INDIA)
EPABX Nos. : 26565600, 26544800
Fax : 91-011-26853041, 26865180

# ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರ- (ನೀಪಾ)

ಶಾಲೆಗಳನ್ನು ಪರಿಣಾಮಕಾರಿ ಗುಣಾತ್ಮಕ ಶಿಕ್ಷಣ ನೀಡುವ ಕೇಂದ್ರವನ್ನಾಗಿ ಪರಿವರ್ತಿಸಲು, ಬದಲಾವಣೆ ಮತ್ತು ನಾವೀನ್ಯಯುತ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು ಸಮರ್ಥ, ಪ್ರಬಲ ಮತ್ತು ವಿಶ್ವಸನೀಯ ನಾಯಕತ್ವ ಬೇಡುತ್ತದೆ. ನೀಪಾ ಸಂಸ್ಥೆಯು ಶಾಲಾ ಮುಖ್ಯಸ್ಥರನ್ನು ಹಾಗೂ ಆಡಳಿತಾಧಿಕಾರಿಗಳನ್ನು ವಿವಿಧ ಅನುಭವ ಹಂಚಿಕೆ ವೇದಿಕೆಗಳ ಮೂಲಕ ಒಂದುಗೂಡಿಸಿದೆಯಾದರೂ ಪ್ರಯತ್ನವನ್ನು ಪರಿಣಾಮಕಾರಿಯಾಗಿ ಹೆಚ್ಚಿಸುವ ಅಗತ್ಯತೆ ಮನಗಂಡಿದೆ. ಈ ನಿಟ್ಟಿನಲ್ಲಿ 'ರಾಷ್ಟ್ರೀಯ ಶಾಲಾ ನಾಯಕತ್ವ ಕೇಂದ್ರ' (NCSL) ವನ್ನು ನೀಪಾ ಸ್ಥಾಪಿಸಿರುವುದು ಸುಸ್ಥಿರ ಪ್ರಯತ್ನಗಳ ಮೂಲಕ ಈ ಅಗತ್ಯತೆಯನ್ನು ಉದ್ದೇಶಿಸುವ ಹೆಜ್ಜೆಯಾಗಿದೆ.

ಶಾಲೆಗಳನ್ನು ಪರಿವರ್ತನೆಯ ಹಾದಿಯಲ್ಲಿ ಮುನ್ನಡೆಸಬಲ್ಲ ನಾಯಕತ್ವವನ್ನು ಬೆಳಸುವುದೇ NCSL ನ ಪ್ರಮುಖ ಆದ್ಯತೆಯಾಗಿದೆ. ಈ ಧ್ಯೇಯವನ್ನು ಸಾಕಾರಗೊಳಿಸಲು ರಾ.ಶಾ.ನಾ.ಕೇಂದ್ರವು, ಆಯಾ ರಾಜ್ಯಗಳ ಶಾಲಾ ಶಿಕ್ಷಣದ ಅಗತ್ಯತೆ ಮತ್ತು ವೈವಿದ್ಯತೆಗಳನ್ನು ಆಧರಿಸಿದ ಪಠ್ಯಕ್ರಮದ ಮೂಲಕ ಶಾಲಾ ಮುಖ್ಯಶಿಕ್ಷಕರ ಸಾಮರ್ಥ್ಯಾಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದು. ಅರ್ಥಪೂರ್ಣ ಅನುಭವಗಳ ಹಂಚಿಕೆ, ಸಹ ಕಲಿಕೆ ಮತ್ತು ಹಂಚಿತ ಸಮಸ್ಯಾ ನಿವಾರಣೆಯನ್ನು ಅನುಕೂಲಿಸಲು ರಾ.ಶಾ.ನಾ ಕೇಂದ್ರವು ಶಾಲೆ ಮತ್ತು ಸಂಭಂಧಿಸಿದ ಸಂಪನ್ಮೂಲ ಕೇಂದ್ರಗಳ ನಡುವೆ ಸಂಪರ್ಕಜಾಲವನ್ನು ಪ್ರೋತ್ಸಾಹಿಸುತ್ತದೆ. ವ್ಯವಸ್ಥೆ ಮತ್ತು ಸಾಂಸ್ಥಿಕ ಹಂತಗಳಲ್ಲಿ ಪ್ರಮಾಣಾಧಾರಿತ ನಿರ್ಧಾರ ಕೈಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ನಾಯಕತ್ವ ಮತ್ತು ಶಾಲಾ ಶಿಕ್ಷಣ ಆಡಳಿತ ಕ್ಷೇತ್ರದ ಸಂಶೋಧನೆಯನ್ನೂ ಕೈಗೊಂಡು ಮುನ್ನಡೆಸುತ್ತದೆ. ರಾ.ಶಾ.ನಾ ಕೇಂದ್ರವು ನಾಯಕತ್ವ ಮತ್ತು ಶಾಲಾ ಶಿಕ್ಷಣ ಆಡಳಿತ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿ ಭಂಡಾರವಾಗಿಯೂ ಕಾರ್ಯನಿರ್ವಹಿಸುತ್ತದೆ.

ನಾಯಕತ್ವ ಕಾರ್ಯಕ್ರಮವು ಸರ್ಕಾರದ ಮತ್ತು ಸರ್ಕಾರದಿಂದ ಅನುದಾನ ಪಡೆದ ಪ್ರಾಥಮಿಕ ಶಾಲೆಯಿಂದ ಹಿರಿಯ ಮಾಧ್ಯಮಿಕ ಶಾಲೆಗಳವರೆಗೆ, ಪ್ರಸ್ತುತ ಮತ್ತು ಹೊಸದಾಗಿ ನೇಮಕವಾದ ಶಾಲಾ ಪ್ರಾಂಶುಪಾಲರುಗಳು ಮತ್ತು ಆಡಳಿತಗಾರರನ್ನು ಹಾಗೂ ಹಿರಿಯ ಶಿಕ್ಷಕರನ್ನು ಒಳಗೊಳಿಸುತ್ತದೆ. ಶಾಲೆ ಮತ್ತು ಶಾಲಾ ಶಿಕ್ಷಣ ವ್ಯವಸ್ಥೆಯು ನಿರ್ವಹಿಸುವ ಮತ್ತು ಮುನ್ನಡೆಸುವ ರೀತಿಯಲ್ಲಿ ಪರಿವರ್ತನೆ ತರುವ ನಿಟ್ಟಿನಲ್ಲಿ ನಾಯಕತ್ವವನ್ನು ಸಾಂಸ್ಥಿಕ, ಗ್ರಾಮ, ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದವರೆಗೆ ಎಲ್ಲಾ ಹಂತಗಳಲ್ಲಿಯೂ ನೆಲೆಗೊಳಿಸುವುದೇ ಈ ಕಾರ್ಯಕ್ರಮದ ವೈಶಿಷ್ಟ್ಯವಾಗಿದೆ.